ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 36 ಸೆಪ್ಟೆಂಬರ್ 2, 1984 ಬೆಲೆ 60 ಪೈಸೆ.

ಪ್ರಜಾಪ್ರಭುತ್ವದ ಮೇಲಿನ ಆಕ್ರಮಣದ ವಿರುದ್ಧ ಕರ್ನಾಟಕದಾದ್ಯಂತ

ಉಕ್ಕಿ ಹರಿದ ಪ್ರತಿಭಟನೆಯ ಮಹಾಪೂರ

ಆಂಧ್ರದ ಸಂವಿಧಾನ ಬದ್ಧ ಚುನಾಯಿತ ಸರ್ಕಾರದ ವಜಾಕ್ಕೆ ಕರ್ನಾಟಕದ ಎಲ್ಲೆಡೆ ತಾನೇ ತಾನಾಗಿ ಸ್ವಯಂ ಸ್ಫೂರ್ತಿಯಿಂದ ವ್ಯಕ್ತಗೊಂಡ ಪ್ರತಿಭಟನೆ, ಪ್ರತಿರೋಧ ಕರ್ನಾಟಕದ ಜನತೆಯ ಹೃದಯದಲ್ಲಿ ಜ್ವಲಿಸುತ್ತಿರುವ ಪ್ರಜಾಪ್ರಭುತ್ವ ಪ್ರೇಮಕ್ಕೆ ಸಾಕ್ಷಿಯಾಗಿದೆ. ಇಂದಿರಾ ಗಾಂಧಿಯವರ ಬರ್ಬರ ಕೃತ್ಯಕ್ಕೆ ರಾಷ್ಟ್ರದ್ಯಂತ ಉಕ್ಕಿ ಹರಿದ ಪ್ರತಿಭಟನೆಯ ಮಹಾಪೂರದಲ್ಲಿ ಕರ್ನಾಟಕದ ಪಾಲು ಬಹಳ ಮಹತ್ವಪೂರ್ಣವಾದುದು. ಕೇವಲ ಒಂದೇ ದೃಷ್ಟಿಯಿಂದಲ್ಲ. ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣವಾದುದು. ಆಂಧ್ರದ ಜನತೆಯ ಜೊತೆಯಲ್ಲಿಯೇ ಕರ್ನಾಟಕದ ಜನತೆ 83 ರ ಜನವರಿ 5 ರಂದು ಸ್ವಾತಂತ್ರ್ಯ ಬಂದ 35 ವರ್ಷಗಳ ನಂತರ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಆದರೆ ಒಂದು ವ್ಯತ್ಯಾಸವಿದೆ. ಬಹಳ ಪ್ರಮುಖವಾದ ವ್ಯತ್ಯಾಸ ಅದು. 83ರ ಜನವರಿಯಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ಸರಕಾರಕ್ಕೆ ತೆಲುಗು ದೇಶಂ ಸರ್ಕಾರದಂತೆ ಮೂರನೇ ಎರಡರಷ್ಟು ಬಹುಮತವಿರಲಿ ತನ್ನಷ್ಟಕ್ಕೆ ತಾನೇ ಸಾಮಾನ್ಯ ಬಹುಮತ ಕೂಡ ಇಲ್ಲ. ಆದುದರಿಂದ ಜನತಾ ಸರ್ಕಾರ ಒಂದು ಕಡೆ ಬಿ.ಜೆ.ಪಿ. ಯ 18 ಶಾಸಕರ ಮೇಲೆ ಮತ್ತೊಂದು ಕಡೆ ಎರಡೂ ಕಮ್ಯುನಿಸ್ಟ್ ಪಕ್ಷಗಳ ಮೇಲೆ ಬಹಳವಾಗಿ ಅವಲಂಬಿಸಿದೆ. ಇದು ಒಂದಕ್ಕೊಂದು ವಿರುದ್ಧವಾದ ಎರಡು ವಿಭಿನ್ನ ಪರಿಸ್ಥಿತಿಗಳಿಗೆ ಕಾರಣವಾಗಿದೆ. ಆಗಿಂದಾಗ್ಗೆ ಬಿ.ಜೆ.ಪಿ. ಯವರ ಕೂಗಾಟ, ಶರತ್ತು ರಹಿತ ಬೆಂಬಲದಿಂದ ಶರತ್ತು ಸಹಿತ ಬೆಂಬಲಕ್ಕೆ ಇಳಿದದ್ದು, ರಾಜ್ಯ ಮಟ್ಟದಿಂದ ಹಿಡಿದು ತಾಲ್ಲೂಕು ಮಟ್ಟದ ವರೆಗಿನ ಆಡಳಿತದಲ್ಲಿ ಸಹಯೋಗಕ್ಕಾಗಿ ಒತ್ತಾಯ ದೈನಂದಿನ ಆಡಳಿತದಲ್ಲಿ ಹಸ್ತಕ್ಷೇಪ ಇವು ಇತ್ತೀಚಿನ ಮತೀಯ ಗಲಭೆಗಳ ಹಿನ್ನೆಲೆಯಲ್ಲಿ ರಾಜ್ಯದ ಜನ ಸಮುದಾಯವು ರಾಜ್ಯ ಸರ್ಕಾರದಿಂದ ದೂರ ಸರಿಯಲಾರಂಭಿಸಲು ಕಾರಣವಾಗಿದೆ.

ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ಜಾತಿಗಳಿಗೆ ಆತಂಕಕ್ಕೆ ಕಾರಣವಾಗಿದೆ. ಇನ್ನೊಂದು ಕಡೆ ಹೆಗಡೆ ಸರ್ಕಾರದ ಈ ಸ್ಥಿತಿ ಕೇರಳದಲ್ಲ ಅಸ್ತಿತ್ವಕ್ಕೆ ಬಂದ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರವನ್ನು ಉರುಳಿಸಿದಂದಿನಿಂದ 25 ವರ್ಷಗಳ ಧೀರ್ಘ ಅವಧಿಯಲ್ಲಿ ಮೈಗೂಡಿಸಿಕೊಂಡ ಸರಕಾರವನ್ನುರುಳಿಸುವ ತಂತ್ರಜ್ಞಾನ, ಕೌಶಲಗಳನ್ನೆಲ್ಲಾ ಆಕರ್ಷಿಸಿದೆ. ಚುನಾವಣೆಯ ಫಲಿತಾಂಶ ಹೊರಬಿದ್ದ ದಿನದಿಂದಲೇ ಕಾಂಗ್ರೆಸ್ (ಐ) ಆರಂಭಿಸಿದ ಜನಾಭಿಪ್ರಾಯವನ್ನು ಪಲ್ಲಟಗೊಳಿಸುವ ತಂತ್ರಗಳು ಹಣದ ಥೈಲಿಗಳೊಂದಿಗೆ ಹರಿಯಾಣ ಖ್ಯಾತಿಯ ಭಜನ್‌ಲಾಲ್ ಮತ್ತು ಬೂಟಾಸಿಂಗರ ಭೇಟಿಗಳು ಮತ್ತು ಬಂಗಾರಪ್ಪನವರ ಹಾರಾಟಗಳು ಜನತೆಯ ತೀವ್ರ ಪ್ರತಿಕ್ರಿಯೆಗೆ ತುತ್ತಾದವು. ಜನತಾದ ಶಾಸಕರೆಲ್ಲರಿಂದ ಒತ್ತಾಯದಿಂದ ಬರೆಸಿಕೊಂಡ ಪಕ್ಷಾಂತರ ಮಾಡುವುದಿಲ್ಲವೆಂಬ ಪ್ರತಿಜ್ಞೆಗಳು ಇದಕ್ಕೆ ಸಾಕ್ಷಿಯಾಗಿವೆ. ಅಂದಿನಿಂದ ಇಂದಿನವರೆಗೂ ಕಾಂಗ್ರೆಸ್ (ಐ) ನ ನಿಲ್ಲದ ಪ್ರಯತ್ನಗಳು ವಿಧಾನ ಸಭೆಯಲ್ಲಿ ಒಳಗೆ ಮತ್ತು ಹೊರಗೆ ಬಹಿರಂಗವಾಗಿ ಮೊಯಿಲಿ ಟೇಪ್ ಮತ್ತು ಶಾಲಿನಿ ತಾಯಿಯ ಥೈಲಿಗಳು ಮನೆ ಮನೆಯ ಕಥೆಯಾದವು. ಇದರ ಜೊತೆಯಲ್ಲಿಯೇ ಒಂದೆರಡು ಪಕ್ಷಾಂತರಗಳು ಮತ್ತು ಇತ್ತೀಚಿನ ಅಜೀಜ್ ಸೇಠ್ ಮತ್ತು ಚಂದ್ರಪ್ರಭಾ ರಾಜೀನಾಮೆಗಳು ಜನತೆಯನ್ನು ಜನತಾ ಸರಕಾರದ ಬಗ್ಗೆ ಜನತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಕುತಂತ್ರಗಳ ವಿರುದ್ಧ ರಾಜ್ಯಾದ್ಯಂತ ನಡೆಸಿದ ಚಳವಳಿ ಮತ್ತು ಜನತಾ ಪಕ್ಷವು ಈ ಪ್ರಶ್ನೆಯನ್ನು ಜನರಿಗೆ ವಿವರಿಸಲು ಮಾಡಿದ ಪ್ರಯತ್ನಗಳು ಜನತೆಯನ್ನು ಸದಾ ಎಚ್ಚರದಲ್ಲಿರುವಂತೆ ಮಾಡಿವೆ.

ಹೀಗೆ ಕಾಂಗ್ರೆಸ್ಸಿನ ಕುತಂತ್ರಗಳ ಸಮೀಪದ ಅನುಭವವನ್ನು ಒಂದೂವರೆ ವರ್ಷದಿಂದ ನಿರಂತರವಾಗಿ ಪಡೆದ ಜನತೆಗೆ ಮಾನ ಮರ್ಯಾದೆಯ ಎಲ್ಲಾ ಗಡಿಯನ್ನು ಮೀರಿದ ನಾಚಿಕೆಗೆಟ್ಟ ಸಂವಿಧಾನಿಕ ಅಶ್ಲೀಲ ವರ್ತನೆ ಆಘಾತವನ್ನುಂಟು ಮಾಡಿದೆ. ತಮ್ಮದೇ ಸರ್ಕಾರದ ಉಳಿವಿನ ಬಗ್ಗೆ ಎಚ್ಚರಾಗುವಂತೆ ಮಾಡಿದೆ. ಈ ಸರ್ಕಾರದ ರಕ್ಷಣೆ ನಮ್ಮದೇ ಜವಾಬ್ದಾರಿ ಎಂಬ ಸಾಮಾನ್ಯ ಜನರ ಪ್ರಜ್ಞೆ ರಾಜ್ಯಾದ್ಯಂತ ನಡೆದ ಪ್ರತಿಭಟನೆಯ ಅಲೆಯಲ್ಲಿ ಅಚ್ಚೊತ್ತಿದೆ. ಘಟನೆ ನಡೆದ ಕ್ಷಣವೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಯತ್ನದ ಫಲವಾಗಿ ಏರ್ಪಟ್ಟ ನಾಲ್ಕು ಪ್ರತಿ ಪಕ್ಷಗಳ ನೇತೃತ್ವದ ಪ್ರತಿಭಟನಾ ಸಭೆಗೆ ಕೇವಲ ಆರೆಂಟು ಗಂಟೆಗಳ ಸೂಚನೆ ಕೊಡಲು ಮಾತ್ರ ಸಾಧ್ಯವಾದರೂ ಬೆಂಗಳೂರಿನಲ್ಲಿ ಪುರಭವನದ ಒಳಗೆ ಹೊರಗೆ ನೆರೆದಿದ್ದ ಜನಸ್ತೋಮವೇ ಈ ಘಟನೆಯ ಕುರಿತಾದ ಜನತೆಯ ಪ್ರತಿಕ್ರಿಯೆಗೆ ರುಜುವಾತಾಗಿತ್ತು. ಅಂದು ನಾಲ್ಕು ಪಕ್ಷಗಳ ಪ್ರಮುಖರು ಆಂಧ್ರ ಪ್ರದೇಶ ಸರ್ಕಾರದ ವಜಾವನ್ನು ಕಟು ಮಾತುಗಳಲ್ಲಿ ಖಂಡಿಸಿದರು. ಅದೇ ದಿನ ರಾಜ್ಯದ ಅನೇಕ ಕಡೆಗಳಲ್ಲಿ ಸಭೆ, ಮೆರವಣಿಗೆಗಳು, ಬಂದ್‌ಗಳ ಮೂಲಕ ಕರ್ನಾಟಕದ ಜನತೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. 17 ರಂದು ಕೋಲಾರದಲ್ಲಿ ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಬಂದ್ ಆಚರಿಸಲಾಯಿತು. ಈ ಸ್ವಯಂ ಸ್ಫೂರ್ತಿಯ ಬಂದ್‌ಗಳಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ನೇತೃತ್ವದ್ದು ಕಾಣುವಂತಿತ್ತು. ಮತ್ತು ಇಡೀ ಜಿಲ್ಲೆಯಲ್ಲಿಯೇ ಪ್ರತಿ ಪಕ್ಷಗಳೆಲ್ಲಾ ಸೇರಿ ಬಂದ್ ಆಚರಿಸಿದರು. ಹೆದ್ದಾರಿಯನ್ನು ಸಂಪೂರ್ಣವಾಗಿ ಅಡ್ಡಗಟ್ಟಲಾಗಿತ್ತು.

ಪಕ್ಷದ ಮತ್ತು ಪಕ್ಷದ ಸಾಮೂಹಿಕ ಸಂಘಟನೆಗಳ ಕ್ರಿಯಾಶೀಲವಾಗಿ ಭಾಗವಹಿಸಿ ಬಾಗೇಪಲ್ಲಿ, ಚಿಂತಾಮಣಿ

(8ನೇ ಪುಟ ನೋಡಿ)

ಆಂಧ್ರ ಸರ್ಕಾರದ ವಜಾ

ಕಾಂಗ್ರೆಸ್ಸಿನ ರಾಜಕೀಯ ಡಕಾಯಿತಿ

ಎನ್. ಟಿ. ರಾಮರಾವ್ ನೇತೃತ್ವದ ತೆಲುಗು ದೇಶಂ ಮಂತ್ರಿಮಂಡಲವನ್ನು ಅತ್ಯಂತ ನಿರಂಕುಶ ರೀತಿಯಲ್ಲಿ ಮತ್ತು ಸಂವಿಧಾನ ವಿರೋಧಿ ರೀತಿಯಲ್ಲಿ ವಜಾ ಮಾಡಲಾಗಿರುವುದು ಮತ್ತು ಅದಕ್ಕಿಂತಲೂ ಹೇಯ ರೀತಿಯಲ್ಲಿ ಅಲ್ಪ ಸಂಖ್ಯಾತ ಪಕ್ಷಾಂತರೀ ಸರ್ಕಾರವನ್ನು ಅಧಿಕಾರಕ್ಕೇರಿಸಿರುವುದು ಆಂಧ್ರ ಪ್ರದೇಶದ ಜನತೆಗಷ್ಟೇ ಅಲ್ಲ, ಇಡೀ ದೇಶದ ಸಮಸ್ತ ಪ್ರಜಾಪ್ರಭುತ್ವವಾದೀ ಜನತೆಗೆ ತೀವ್ರ ಆಘಾತವನ್ನುಂಟು ಮಾಡಿದೆ. ಈ ಕುರಿತು ದೇಶದ ಅನೇಕ ದಿನ ಪತ್ರಿಕೆಗಳು "ಪ್ರಜಾಪ್ರಭುತ್ವದ ಕೊಲೆ" "ಒರಟು ನಡವಳಿಕೆ" "ಹೈದರಾಬಾದ್‌ನಲ್ಲಿ ನಡೆದ ಬುಡಮೇಲು ಕೃತ್ಯ" "ಆಂಧ್ರದಲ್ಲಿ "ದೌರ್ಜನ್ಯ" ಅಪಾಯಕಾರೀ ಘಟನೆ" "ಆರಿ ಹೋಗುತ್ತಿರುವ ಬೆಳಕು" ಮುಂತಾಗಿ ಸಂಪಾದಕೀಯ ಶಿರೋನಾಮೆಗಳನ್ನು ಕೊಟ್ಟಿವೆ ಇವುಗಳನ್ನೆಲ್ಲಾ ನಾವು ಒಪ್ಪಿಯೂ ಆಂಧ್ರದ ಘಟನೆಯನ್ನು ನಾವು "ರಾಜಕೀಯ ದರೋಡೆ, ಕುಯುಕ್ತಿ, ಮತ್ತು ಹೆದ್ದಾರಿ ದರೋಡೆ" ಎಂದು ಕರೆಯುತ್ತೇವೆ. ಇಂತಹ ಅಸಹ್ಯಕರವಾದ ಮತ್ತು ಹುಚ್ಚು ಘಟನೆ ಜಗತ್ತಿನ ಪಾರ್ಲಿಮೆಂಟರೀ ಪ್ರಜಾಪ್ರಭುತ್ವದಲ್ಲಿ ಹಿಂದೆಂದೂ ನಡೆದಿರಲಿಲ್ಲ.

ಆಂಧ್ರ ಪ್ರದೇಶದ ರಾಜ್ಯಪಾಲರು ಕೇಂದ್ರ ಸರ್ಕಾರ ನೇಮಿಸುವ ರಾಜ್ಯಪಾಲರಂತೆ ವರ್ತಿಸದೆ ಕಾಂಗ್ರೆಸ್ (ಐ) ಹೈಕಮಾಂಡ್ ನೇಮಿಸಿದ ಸೇವಕನಂತೆ ವರ್ತಿಸಿದ್ದಾರೆ. ಇತರ ಪ್ರತಿಪಕ್ಷಗಳ ಇಪ್ಪತ್ತು ಶಾಸಕರನ್ನೊಳಗೊಂಡ 165 ಶಾಸಕರನ್ನು ಕಾಣಲು ನಿರಾಕರಿಸಿ, ಪಕ್ಷಾಂತರಿ ಭಾಸ್ಕರರಾವ್ ಕೊಟ್ಟ "ಬಹುಮತ"ದ ಪಟ್ಟಿಯನ್ನು ಒಪ್ಪಿ ಅವರು ಸರ್ಕಾರ ರಚಿಸಲು ಅವಕಾಶ ನೀಡುವಂತ ಧೈರ್ಯವನ್ನು ಹೊಂದಿದ್ದು ಇದಕ್ಕೆ ನಿದರ್ಶನ.

ಆಂಧ್ರದ ರಾಜ್ಯಪಾಲ ರಾಮಲಾಲರು ರಾಜ್ಯಾಂಗ ಬದ್ಧವಾದ ಕರ್ತವ್ಯಕ್ಕೆ ಬದಲಾಗಿ ಕೇಂದ್ರ ಕಾಂಗ್ರೆಸ್ (ಐ) ಸರ್ಕಾರದ ಸಲಕರಣೆಯಾಗಿ ವರ್ತಿಸಿರುವುದನ್ನು ಯಾರೂ ಪ್ರಜ್ಞಾಪೂರ್ವಕವಾಗಿ ಒಪ್ಪಲಾರರು. ಎನ್. ಟಿ. ರಾಮರಾವ್ ಅವರು ಹೃದಯದ ಶಸ್ತ್ರ ಚಿಕಿತ್ಸೆಗಾಗಿ ಒಂದು ತಿಂಗಳ ಕಾಲ ವಿದೇಶದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ಕೇಂದ್ರ ಕಾಂಗ್ರೆಸ್ (ಐ) ಸರ್ಕಾರ ನಡೆಸಿದ ಯೋಜಿತ ಪಿತೂರಿ ಇದು ಎಂಬುದು ನಿರ್ವಿವಾದ. ಎನ್. ಟಿ. ಆರ್. ಅವರು ಆಗಸ್ಟ್ 15 ರಂದು ಆಂಧ್ರಕ್ಕೆ ಹಿಂತಿರುಗಿದರು. 16 ರಂದು ಅವರ ಸರ್ಕಾರವನ್ನು ವಜಾ ಮಾಡಲಾಯಿತು. ಎನ್. ಟಿ. ಆರ್. ಅವರು ವಿದೇಶಕ್ಕೆ ತೆರಳಿದ ಮರುದಿನ ಕೇಂದ್ರದ ರಾಜ್ಯ ಗೃಹ ಸಚಿವರು ಹೈದರಾಬಾದಿಗೆ ನೀಡಿದ ಭೇಟಿ ಮತ್ತು ಜುಲೈ 19 ರಂದು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಹೈದರಾಬಾದಿಗೆ ನೀಡಿದ ಒಂದು ದಿನದ ಭೇಟಿಯು ಆಗಸ್ಟ್ 16 ರ ಘಟನೆಗೆ ಒಳಸಂಚು ನಡೆಸುವುದನ್ನು ಗುರಿಯಾಗಿಸಿಕೊಂಡಿತ್ತು ಎಂಬುದು ಈಗ ಬಯಲಾಗಿರುವ ಸಂಗತಿ.

ಆಗಸ್ಟ್ 20 ರಂದು ಸಂಜೆ 6 ಗಂಟೆಗೆ ಎನ್. ಟಿ. ಆರ್. ಪರ ಶಾಸಕರು ರಾಷ್ಟ್ರಪತಿಯನ್ನು ಭೇಟಿಯಾಗುವ ಕಾರ್ಯಕ್ರಮ ನಿಗದಿಯಾಗಿದ್ದು ಅದನ್ನು ತಪ್ಪಿಸುವ ಉದ್ದೇಶದಿಂದ ಕೇಂದ್ರ ರೈಲ್ವೆ ಅಧಿಕಾರಿಗಳಿಗೆ ಆಳುವ ಕಾಂಗ್ರೆಸ್ ಪಕ್ಷ ತಾಕೀತು ಮಾಡಿ ಪ್ರಯಾಣದಲ್ಲಿ ವಿಳಂಬವಾಗುವಂತೆ ಮಾಡಿದ್ದು ಎನ್. ಟಿ. ಆರ್. ಮತ್ತಿತರರು ಪ್ರಯಾಣ ಮಾಡಬೇಕಿದ್ದ ವಿಮಾನವನ್ನು 5 ಗಂಟೆಗಳ ಕಾಲ ತಡ ಮಾಡಿದ್ದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಇವುಗಳೆಲ್ಲಾ ಈ ದೇಶದ ಉನ್ನತ ಸರಕಾರೀ ಅಧಿಕಾರ, ಪ್ರಧಾನ ಮಂತ್ರಿ ಮತ್ತವರ ಕ್ಯಾಬಿನೆಟ್ ನಡೆಸಿರುವ ರಾಜಕೀಯ ಗೂಂಡಾಗಿರಿಯಲ್ಲದೆ ಮತ್ತೇನು ?

ಬಹುಮತ ವಿದ್ದ ತೆಲುಗು ದೇಶಂ ಸರ್ಕಾರವನ್ನು ಉರುಳಿಸಿ ಪಕ್ಷಾಂತರಿಗಳ ಅಲ್ಪ ಮತದ ಸರ್ಕಾರವನ್ನು ಸ್ಥಾಪಿಸುವ ಆತುರದಲ್ಲಿ ಶ್ರೀಮತಿ ಗಾಂಧಿಯವರು ರಾಜಕೀಯ ಸಭ್ಯತೆಯನ್ನು ಕಳೆದುಕೊಂಡಿರುವಂತೆ ತೋರುತ್ತದೆ.

[8ನೇ ಪುಟ ನೋಡಿ]

— ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಮತ್ತೆ ಚುನಾವಣಾ ಸ್ಟಂಟ್

ದೇಶದ ಜನತೆ ಕುರಿಗಳೆಂದು ತಿಳಿದುಕೊಂಡ ಇಂದಿರಾಗಾಂಧಿ ಲೋಕಸಭೆಯ ಚುನಾವಣೆ ಸಮೀಪಿಸುತ್ತಿದ್ದಂತೆ ಕನ್ನಡಿಗರಿಗೆ ಮೋಸದ ಮಿಠಾಯಿ ತಿನ್ನಿಸ ಹೊರಟಿದ್ದಾರೆ. ಏಳನೆಯ ಯೋಜನೆಯ ಅವಧಿಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ರೂ 400 ಕೋಟಿ ಮೀಸಲಿಡಲಾಗಿದೆಂದು ಕೇಂದ್ರ ಸರಕಾರದ ಉಕ್ಕು ಖಾತೆಯ ಮಂತ್ರಿ ಸಾಳ್ವೆ ಸಾರಿದ್ದಾರೆ. ಗೋರ್ಪಡೆ ಮತ್ತಿತರ ಕಾಂಗ್ರೆಸ್ ಲೋಕಸಭೆ ಸದಸ್ಯರು ಉಪವಾಸ ಸತ್ಯಾಗ್ರಹ ಹೂಡುತ್ತೇವೆಂದು ಹುಸಿಗುಂಡು ಹಾರಿಸಿದಾಗ ಜಾಣಾಕ್ಷಿ ಇಂದಿರಮ್ಮ ಸಾಳ್ವೆಯ ಹಸ್ತದಿಂದ ಸಿಹಿಗುಂಡು ಚಲಾಯಿಸಿಯೇ ಬಿಟ್ಟರು. ಈ ಪೊಳ್ಳು ಆಶ್ವಾಸನೆ ಲೋಕಸಭೆ ಚುನಾವಣೆಯಲ್ಲಿ ಮತಗಳಿಕೆಯ ಆಮಿಷೆಯಲ್ಲದೆ ಮತ್ತೇನಲ್ಲವೆಂದು ಕನ್ನಡಿಗರಿಗೆ ಚೆನ್ನಾಗಿ ಗೊತ್ತು. ಇದಕ್ಕೆ ಯಾರೂ ಬಲಿ ಬೀಳುವುದಿಲ್ಲ.

ಕರ್ನಾಟಕದ ಶಾಸನ ಸಭೆಯ ಚುನಾವಣೆಯ ಮುನ್ನ ಇದೇ ಗೋರ್ಪಡೆ ಕಂಪೆನಿ ಇದೇ ಸಾಳ್ವೆಯರನ್ನು ಕರೆಸಿ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿಯೇ ಒಂದು ಸಂಸ್ಥೆ ಸ್ಥಾಪಿಸಿ ಮತಗಳಿಕೆಯ ಆಟ ಹೂಡಿರುವುದನ್ನು ಯಾರೂ ಮರೆತಿಲ್ಲ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಇದರ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆ ಕುರಿತು ವರದಿ ಸಿದ್ಧವಾಗಿತ್ತು. 1971 ರಲ್ಲಿ ಆಗಿನ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಇಂದಿರಾಗಾಂಧಿ ಅಡಿಗಲ್ಲು ಹಾಕಿದ್ದರು. ಇಡೀ ಕರ್ನಾಟಕವಷ್ಟೇ ಅಲ್ಲ, ದೇಶದ ಕೈಗಾರಿಕೋದ್ಯಮದ ಬೆಳವಣಿಗೆಗೆ, ವಿದೇಶೀ ವಿನಿಮಯದ ಗಳಿಕೆಗೆ ಈ ಕಾರ್ಖಾನೆಯ ಅವಶ್ಯಕತೆ ಇದೆಂದು ತಿಳಿಸೀ ವರದಿ ಸಿದ್ಧಪಡಿಸಲಾಗಿತ್ತು. ಅಡಿಗಲ್ಲು ಹಾಕಲಾಗಿತ್ತು. ಆದರದು ಮರೀಚಿಕೆಯಂತೆ ದೂರ ದೂರ ಸರಿಯುತ್ತಿದೆ.

ಸಿಪಿಐ (ಎಂ) ನೇತೃತ್ವದ ಸರಕಾರ ಇರುವ ಪಶ್ಚಿಮ ಬಂಗಾಲಕ್ಕೂ, ಸಿದ್ಧಪಡಿಸಿ, ಆಶ್ವಾಸನೆ ನೀಡಲಾದ ಹಲವಾರು ಪ್ರಮುಖ ಯೋಜನೆಗಳನ್ನು ಕೇಂದ್ರ ಸರಕಾರ ಕೈ ಬಿಡುತ್ತಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಇದ್ದಾಗಲೂ, ಈಗ ಜನತಾ ಸರಕಾರ ಇರುವಾಗಲೂ ಚುನಾವಣೆ ಬಂದಾಗ, ಚಳುವಳಿ ನಡೆದಾಗ ಆಶ್ವಾಸನೆಗಳ ಸುರಿಮಳೆಗರೆಯಲಾಗುತ್ತಿದೆಯಲ್ಲದೆ, ಉಕ್ಕಿನ ಕಾರ್ಖಾನೆ ರಚನೆಯಾಗುವ ಸಂಭವವೇ ಇಲ್ಲ.

ಕರ್ನಾಟಕದ ಯುವಜನ ಸಂಘಟನೆ, ವಿದ್ಯಾರ್ಥಿ ಫೆಡರೇಶನ್, ಎಡದ ಕಮ್ಯುನಿಸ್ಟ್ ಪಕ್ಷಗಳು ಹಾಗೆಯೇ ಹಲವಾರು ಸಂಘ-ಸಂಸ್ಥೆಗಳು ಈ ಕಾರ್ಖಾನೆಯ ಸಲುವಾಗಿ ನಾನಾ ರೀತಿಯ ಚಳುವಳಿ ನಡೆಸುತ್ತಲೇ ಇದ್ದಾರೆ. ರಾಜ್ಯಗಳ ಅಭಿವೃದ್ಧಿ ಕುರಿತು ಕೇಂದ್ರ ಸರಕಾರದ ನೀತಿ ಬದಲಾಗಬೇಕು. ಅದರ ಸಲುವಾಗಿ ಬಲವಾದ ಚಳುವಳಿ ನಡೆಯಬೇಕು. ಇಲ್ಲವಾದರೆ ನಾವು ಸ್ಟಂಟುಗಳ ಮಳೆಯಲ್ಲೇ ತೊಯಿಸಿಕೊಳ್ಳಬೇಕಾಗುತ್ತದೆ.

ಗ್ರಾಮಾಭಿವೃದ್ಧಿ ಸಮಿತಿಗಳು

ಕರ್ನಾಟಕದ ವಿಧಾನ ಸಭೆಯಲ್ಲಿ ಮಂಜೂರಾದ ಜಿಲ್ಲಾ ಪರಿಷತ್ ಮಸೂದೆ ರಾಷ್ಟ್ರಾಧ್ಯಕ್ಷರ ಸಹಿಗಾಗಿ ದಾರಿ ಕಾಯುತ್ತಿದೆ. ಪಶ್ಚಿಮಬಂಗಾಲದಂತ ರಾಜ್ಯಗಳ ಮಸೂದೆಗಳ ಗತಿಯೂ ಅದೇ ರೀತಿ ಇದೆ. "ಕಾರ್ಯ ಮಾಡುವ" ಸರಕಾರ ರಚಿಸುತ್ತೇನೆಂದು ಚುನಾವಣೆ ಸಮಯದಲ್ಲಿ ಇಂದಿರಾಗಾಂಧಿ ಜನತೆಗಿತ್ತ ಆಶ್ವಾಸನೆಯ ವೈಖರಿ ರಾಷ್ಟ್ರಾಧ್ಯಕ್ಷ ಸಹಿಗಾಗಿ ಕಾಯುತ್ತಿರುವ ನೂರಾರು ಮಸೂದೆಗಳ ದುರ್ಗತಿಯಿಂದಲೇ ಎದ್ದು ಕಾಣುತ್ತದೆ. ಅಧಿಕಾರದ ವಿಕೇಂದ್ರೀಕರಣ ಮಾಡಿ ಗ್ರಾಮಾಭಿವೃದ್ಧಿಯ ಕಾರ್ಯವನ್ನು ಚುನಾಯಿತ ಕಮಿಟಿಗಳಿಗೆ ಒಪ್ಪಿಸಬೇಕೆಂದು ಜನತಾ ಸರಕಾರ ಜಿಲ್ಲಾ ಪರಿಷತ್ ಮಸೂದೆಗೆ ಶಾಸನ ಸಭೆಯಿಂದ ಮಂಜೂರಿ ಪಡೆದಿತ್ತು. ಆ ಮಸೂದೆಯಂತೆ ಜಿಲ್ಲಾ ಪರಿಷತ್, ತಾಲ್ಲೂಕ್ ಅಭಿವೃದ್ಧಿ ಮಂಡಳಿ, ಮಂಡಲ ಕಮಿಟಿಗಳಿಗೆ ಚುನಾವಣೆ ನಡೆಸಿ ಅವುಗಳಿಗೆ ಅಭಿವೃದ್ಧಿ ಕಾರ್ಯ ಒಪ್ಪಿಸಬೇಕಾಗಿತ್ತು. ಮಸೂದೆಗೆ ರಾಷ್ಟ್ರಾಧ್ಯಕ್ಷರ ಸಹಿ ಯಾವಾಗ ಬೀಳುತ್ತದೆಂದು ಗೊತ್ತಾಗದ ಕಾರಣ ಗ್ರಾಮಾಭಿವೃದ್ಧಿ ಸಮಿತಿಗಳನ್ನು ನೇಮಿಸಬೇಕೆಂದು ರಾಜ್ಯ ಸರಕಾರ ನಿರ್ಣಯಿಸಿದೆ.

ನಾವು ಆರನೆಯ ಯೋಜನೆಯ ಮುಕ್ತಾಯ ಹಂತದಲ್ಲಿದ್ದರೂ ಕೂಡ, ಯೋಜನೆಗಳ ಕುರಿತು ಗ್ರಾಮಾಂತರ ಜನರಿಗೆ ತಿಳುವಳಿಕೆಯಿಲ್ಲ, ಅಭಿರುಚಿಯಿಲ್ಲ, ಅವರ ಅಭಿಪ್ರಾಯ ಕೇಳುವವರಿಲ್ಲ. ಯೋಜನೆಗಳ ರೂಪರೇಶ, ತಯಾರಿಕೆಗಳೆಲ್ಲ ಮೇಲ್ಮಟ್ಟದಲ್ಲೇ ನಡೆಯುತ್ತಿವೆ. ಅವುಗಳು ಅವಾಸ್ತವವಾಗಿ ತಯಾರಾಗುತ್ತಿವೆ. ಅಂಥ ಯೋಜನೆಗಳ ಜಾರಿಗೆ ಆರ್ಥಿಕ ಚೌಕಟ್ಟು, ದಕ್ಷ ಆಡಳಿತ ಅತ್ಯಗತ್ಯ.

ಗ್ರಾಮ ಮಟ್ಟದಿಂದಲೇ ಯೋಜನೆಗಳನ್ನು ಅನುಷ್ಠಾನದಲ್ಲಿ ತರುವ ಇಚ್ಛೆಯನ್ನು ಪಂಚಾಯತ್ ರಾಜ್ಯ ಸಚಿವ ಅಬ್ದುಲ್ ನಾಜೀರ್ ಸಾಬರು ವ್ಯಕ್ತ ಮಾಡಿದ್ದಾರೆ. ಆದರೆ ಜನತಾ ಪಕ್ಷ ಹಾಗೂ ಅದರ ಸರಕಾರದ ಪರಿಸ್ಥಿತಿಯನ್ನು ನೋಡಿದರೆ ಮಂತ್ರಿಗಳ ಕನಸು ಎಷ್ಟರ ಮಟ್ಟಿಗೆ ನನಸಾದೀತೆಂದು ಹೇಳುವುದು ಕಷ್ಟ.

ಪಂಚಾಯತಿ, ತಾಲೂಕ್ ಬೋರ್ಡುಗಳು ಹಿಂದಿನ ವರ್ಷದ ಮಧ್ಯದಿಂದಲೇ ಚುನಾವಣೆಯಾಗದೆ ಅಧಿಕಾರಿಗಳ ವಶದಲ್ಲಿವೆ. ಈ ಸಮಿತಿಗಳಿಗೆ ಸದಸ್ಯರನ್ನು ನೇಮಿಸಲಾಗುವುದು. ಕಳೆದ ಹದಿನೆಂಟು ತಿಂಗಳುಗಳಲ್ಲಿ ಬೇರೆ ಬೇರೆ ಕಮಿಟಿಗಳಿಗೆ ಸರಕಾರ ನೇಮಿಸಿದ ಸದಸ್ಯರು ಜನತಾ ಸರಕಾರಕ್ಕೆ ಕಳಂಕ ತಂದಿದ್ದಾರೆ. ತಮ್ಮ ಜವಾಬ್ದಾರಿಯಿಂದ ವರ್ತಿಸುವಲ್ಲಿ ವಿಫಲಗೊಂಡಿದ್ದಾರೆ. ಈ ಸಮಿತಿಗಳಿಗೆ ನಿಷ್ಠಾವಂತ ಭ್ರಷ್ಟಾಚಾರರಹಿತರಾದ ಸದಸ್ಯರನ್ನು ನೇಮಿಸಬೇಕು. ಎಲ್ಲ ಪಕ್ಷ, ರೈತ ಸಂಘದಂತ ಸಂಘಟನೆಗಳಿಗೆ ಪ್ರಾತಿನಿಧ್ಯ ಸಿಗಬೇಕು. ಇಲ್ಲವಾದರೆ ಯಾವ ಉದ್ದೇಶದಿಂದ ಅಂಥ ಸಮಿತಿಗಳನ್ನು ರಚಿಸಲಾಗುತ್ತಿದೆಯೋ ಅದು ಫಲಿಸಲು ಸಾಧ್ಯವಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತವೇ ಜಾಸ್ತಿ. ಜನಜಾಗೃತಿ ಮೂಲಕ ಅದನ್ನು ಹಿಂದೆ ಸರಿಸಿ ಬಹುಸಂಖ್ಯಾತರಿಗೆ ಅನುಕೂಲವಾಗುವಂಥ ಅಭಿವೃದ್ಧಿ ಕಾರ್ಯಗಳಾಗಬೇಕಾಗಿದೆ. ಈ ದಿಸೆಯಲ್ಲಿ ಮಂತ್ರಿ ಅಬ್ದುಲ್ ನಜೀರ್ ಸಾಬರು ಜಾಗೃತಿ ವಹಿಸುವುದು ಅತ್ಯಗತ್ಯ.

ಸಿ.ಪಿ.ಐ. ಮತ್ತು ಆಗಸ್ಟ 25 ರ ಮುಷ್ಕರ

ಆಂಧ್ರದ ರಾಮರಾವ್ ಮಂತ್ರಿಮಂಡಲದ ವಿಸರ್ಜನೆಯನ್ನು ಪ್ರತಿಭಟಿಸಿ, ರಾಜ್ಯಪಾಲ ರಾಮಲಾಲ್ ಮತ್ತು ಕೇಂದ್ರ ಸರಕಾರದ ನೀತಿಯ ವಿರುದ್ಧ ಜನರು ಸ್ವಯಂ ಸ್ಫೂರ್ತಿಯಿಂದ ಪ್ರತಿಭಟನೆ ವ್ಯಕ್ತ ಮಾಡುತ್ತಿದ್ದಾರೆ. ಇಂಥ ರಾಜಕೀಯ ಪ್ರಶ್ನೆಯಲ್ಲಿ ಕಾರ್ಮಿಕ ವರ್ಗ ಕ್ರಿಯಾಶೀಲವಾಗಿ ಭಾಗವಹಿಸುವುದು ಅತ್ಯಗತ್ಯ. ಸಿಐಟಿಯು ಮತ್ತು ಎಐಟಿಯುಸಿ - ರಾಜಕೀಯ ತಿಳುವಳಿಕೆ ಹೊಂದಿದ ಕಾರ್ಮಿಕ ವರ್ಗ - ಅಂಥ ಚಳುವಳಿಯ ಮುಂಚೂಣಿಯಲ್ಲಿರಲೇ ಬೇಕು.

ಬೆಂಗಳೂರಿನ ಕೇಂದ್ರ ಕಾರ್ಮಿಕ ಸಂಘಟನೆಗಳು ಸಭೆ ಸೇರಿ ಆಗಸ್ಟ 25 ರಂದು ಒಂದು ದಿನದ ಪ್ರತಿಭಟನಾ ಮುಷ್ಕರ ಹೂಡಲು ನಿರ್ಣಯಿಸಿದ್ದವು. ಇಂಥ ಮಹತ್ತರ ಪ್ರಶ್ನೆಯ ಕುರಿತು ಕೇಂದ್ರವನ್ನು ವಿಚಾರಿಸುವ ಅಗತ್ಯವೇ ನಿಲ್ಲ. ಆದರೆ ನಮ್ಮ ಎಐಟಿಯುಸಿ ಗೆಳೆಯರು ತಮ್ಮ ದಿಲ್ಲಿ ಕೇಂದ್ರದ ಅಪ್ಪಣೆ ಕೇಳಿದರಂತೆ. ತಾ॥ 22 ಸಂಜೆ 7 ಗಂಟೆಯವರೆಗೆ ದಿಲ್ಲಿಯಿಂದ ಆದೇಶ ಬರಲಿಲ್ಲ. ಆದ ಕಾರಣ ತಾವೇ ಕೈಗೊಂಡ ನಿರ್ಣಯವನ್ನು ಕೈಬಿಡಲು ಈ ಗೆಳೆಯರು ನಿರ್ಣಯಿಸಿದರು. ಕೊನೆಗೆ ರಾತ್ರಿ ದಿಲ್ಲಿಯಿಂದ ತಂತಿ ಸಂದೇಶ ಬಂದ ಕೂಡಲೇ ಮುಷ್ಕರ ಮಾಡುವ ನಿರ್ಣಯ ಕೈಗೊಂಡರು. ಅವರ ನಿಲುವೆಯಿಂದಾಗಿ ಪ್ರಚಾರಕ್ಕೆ ಅತಂಕ ಉಂಟಾಯಿತು. ಕರಪತ್ರ, ಪೋಸ್ಟರ್‌ಗಳು ಸಕಾಲದಲ್ಲಿ ಹೊರಬೀಳಲಿಲ್ಲ. ಕಾರ್ಮಿಕ ವರ್ಗದ ಹೋರಾಟವನ್ನು ಮುಂದಕ್ಕೊಯ್ಯಲು ಪ್ರಜಾಪ್ರಭುತ್ವ ಅಗತ್ಯವಾಗಿರುವಾಗ, ಇಂದಿರಾಗಾಂಧಿ ಅದನ್ನು ನಾಶ ಮಾಡುತ್ತಿರುವಾಗ, ಅಂಥ ಕೃತಿಯನ್ನು ಖಂಡಿಸಲು ಜನತೆ ಸ್ವಯಂ ಸ್ಫೂರ್ತಿಯಿಂದಲೇ ಮುಂದೆ ಬರುತ್ತಿರುವಾಗ ದಿಲ್ಲಿಯ ಆದೇಶ ಕಾಯುವ ಎಐಟಿಯುಸಿ ಸಂಗಾತಿಗಳ ನಿಲುವೆ ಅಕ್ಷಮ್ಯವಾಗಿದೆ. ಕಾರ್ಮಿಕ ವರ್ಗ ರಾಜಕೀಯ ಪ್ರಶ್ನೆಗಳ ವಿಷಯಗಳಲ್ಲಿ ಹೋರಾಡಲು ಪ್ರತಿಭಟನೆ ವ್ಯಕ್ತ ಮಾಡಲು ಸಕೆ, ಯಾವಾಗ ಮುಂದೆ ಬರಬೇಕೆಂದು ಹೇಳುವ ಎಐಟಿಯುಸಿ ಮುಖಂಡರ ಈ ಚಂಚಲತೆ ಅಕ್ಷಮ್ಯ. ಅಂಥ ನಿಲುವೆ ಸಂಯುಕ್ತ ಹೋರಾಟಕ್ಕೆ ಧಕ್ಕೆ ಉಂಟುಮಾಡುತ್ತದೆ. ಬೇರೆ ಕೇಂದ್ರೀಯ ಸಂಘಟನೆಗಳು ಅಂಥ ನಿಲುವೆ ತಾಳಿದರೆ ಆಶ್ಚರ್ಯವೇನಿಲ್ಲ. ಆದರೆ ಎಐಟಿಯುಸಿ ಗೆಳೆಯರ ವರ್ತನೆ ಮಾತ್ರ ಸರಿಯಲ್ಲವೆಂದೇ ಹೇಳಬೇಕಾಗಿದೆ.

ದಲಿತರ ಹೀನಾಯ ಸ್ಥಿತಿ

ದಲಿತರ ಮೇಲಾಗುತ್ತಿರುವ ಅನ್ಯಾಯ ಖಂಡಿಸಿ ಬೆಂಗಳೂರು ಜಿಲ್ಲೆಯ ಸಾವಿರಾರು ದಲಿತರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮತಪ್ರದರ್ಶನ ಮಾಡಿದರು. ಬಿಜಾಪುರ ಇತ್ಯಾದಿ ಇತರ ಪ್ರದೇಶಗಳಲ್ಲಿ ಕೂಡ ಅಂಥ ಪ್ರದರ್ಶನಗಳು ನಡೆದಿವೆ.

ಸ್ವರಾಜ್ಯ ಪಡೆದ 37 ವರ್ಷಗಳ ನಂತರವೂ ದಲಿತ ವರ್ಗದ ಮೇಲೆ ದಿನನಿತ್ಯ ದೇಶಾದ್ಯಂತ ಅನ್ಯಾಯ, ಅತ್ಯಾಚಾರ ನಡೆಯುತ್ತಲೇ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಭಾವಿ, ಚಹಾದಂಗಡಿ, ದೇವಸ್ಥಾನ, ಸಜಾತಿಯವರ ಸಾರ್ವಜನಿಕ ಸ್ಥಳಗಳಿಗೆಲ್ಲ ದಲಿತರಿಗೆ ಇಂದಿಗೂ ಪ್ರವೇಶವಿಲ್ಲ. ವಾಸ ಸ್ಥಳ, ಭೂಮಿ ಹಂಚಿಕೆಯಲ್ಲಿಯೂ ಅನ್ಯಾಯ.

ಗ್ರಾಮಾಂತರ ಪ್ರದೇಶದಲ್ಲಿ, ಸಾಮಾಜಿಕ ಪದ್ಧತಿಯಲ್ಲಿ ಬದಲಾವಣೆಯಾಗಿಲ್ಲ. ಭೂಮಾಲಕರ-ಸಾವುಕಾರರ ಹಿಡಿತ—ಪ್ರಭಾವ ಕಡಿಮೆಯಾಗಿಲ್ಲ. ದಲಿತರ ಸಮಸ್ಯೆಗೆ ಪರಿಹಾರ ಕಾಣಬೇಕಾದರೆ ಭೂಮಾಲಕ ಪದ್ಧತಿ ನಾಶವಾಗಿ, ಭೂಮಿ ಸಂಬಂಧ ಬದಲಾಗಬೇಕು ಹಳ್ಳಿ ವ್ಯವಹಾರ ಪದ್ಧತಿಯಲ್ಲಿ ತಿದ್ದುಪಡಿ ಆಗಬೇಕು. ಗ್ರಾಮ ಪಂಚಾಯತಿ, ಸೊಸೈಟಿಗಳ ಆಡಳಿತೆಯಲ್ಲಿಯ ಹಿಡಿತ ಪಟ್ಟಭದ್ರ ಹಿತಾಸಕ್ತಿಗಳ ಕೈ ಬಿಡಬೇಕು.

ದಲಿತರ ಹಿತರಕ್ಷಣೆಗಾಗಿ ಕಾಯಿದೆ-ಕಾನೂನುಗಳ ಅಭಾವವೇನಿಲ್ಲ. ಆದರೆ ಅವುಗಳನ್ನು ಅನುಷ್ಠಾನದಲ್ಲಿಳಿಸುವವರಿಲ್ಲ. ದಲಿತರ ಮೇಲೆ ಅನ್ಯಾಯ—ಅತ್ಯಾಚಾರಗಳಾದರೆ ಅವರಿಗೆ ರಕ್ಷಣೆ ಸಿಗುತ್ತಿಲ್ಲ. ದಾಖಲೆಗಾಗಿಯಷ್ಟೇ ಖಟ್ಲೆ ಹಾಕಲಾಗುತ್ತಿದೆ.

ಗ್ರಾಮಾಂತರ ಪ್ರದೇಶದಲ್ಲಿ ಬಲಿಷ್ಠವಾದ ಪ್ರಾಂತ ರೈತ ಸಂಘಟನೆ, ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿ ಬೆಳೆಯಬಾರದಿದ್ದರೆ ದಲಿತರ ಸಮಸ್ಯೆ ಪರಿಹಾರ ಕಾಣುವುದಿಲ್ಲ. ಆ ದಿಸೆಯಲ್ಲಿ ಕೆಲಸ ನಡೆಯುವುದು ಅತ್ಯಗತ್ಯ.

★

ನಗರ ಸಭೆಯಿಂದಾದ ಅನ್ಯಾಯದ ಪ್ರತಿಭಟನೆ

ಬಿಜಾಪುರ ನಗರ ಸಭೆಯವರು ಚಿಕ್ಕ ವ್ಯಾಪಾರಸ್ಥರಿಗೆ ಮೋಸ ಮಾಡಿ ಮೀನಾಕ್ಷಿ ಚೌಕದಲ್ಲಿ ಸದಸ್ಯರ ಮರ್ಜಿಯಂತೆ ತಮಗೆ ಬೇಕಾದವರಿಗೆ ಅಂಗಡಿ ಮಂಜೂರುಮಾಡಿರುವುದನ್ನು ಪ್ರತಿಭಟಿಸಲು ಗಾಂಧಿ ಚೌಕದಲ್ಲಿ ಬಡ ವ್ಯಾಪಾರಸ್ಥರೆ ಅನ್ನ ಸತ್ಯಾಗ್ರಹ ನಡೆದಿದ್ದು, ಅವರ ಬೇಡಿಕೆಗಳಿಗೆ ಬೆಂಬಲ ನೀಡಲು ಆಗಸ್ಟ 15 ರಂದು ಬಿಜಾಪುರದಲ್ಲಿ ಸರ್ವಪಕ್ಷಗಳ ವತಿಯಿಂದ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಜನತಾ ಪಕ್ಷದ ಮಾಜಿ ಅಧ್ಯಕ್ಷ ಐ. ಸಿ. ನಾಗರಾಣಿ ಅವರು ಅಧ್ಯಕ್ಷತೆ ವಹಿಸಿದ್ದರು. ಭೀಮಸಿ ಕಲಾದಗಿ, ಎಂ. ಎಫ್. ಇನಾಮದಾರ, ರಾ. ಕ. ಕುಲಕರ್ಣಿ ಮೊದಲಾದವರು ಭಾಷಣ ಮಾಡಿ ಇಂದಿರಾ ಗಾಂಧಿಯ ಆಳ್ವಿಕೆಯಲ್ಲಿ ಜನರಿಗಾಗುತ್ತಿರುವ ಅನ್ಯಾಯವನ್ನು ವಿವರಿಸಿ ಬಿಜಾಪುರ ನಗರ ಸಭೆಯ ಆಡಳಿತೆಯನ್ನು ಖಂಡಿಸಿ ಮಾತನಾಡಿದರು. ಕೊನೆಯಲ್ಲಿ ಶೇಖ ವಕೀಲರು ವಂದನಾರ್ಪಣೆ ಮಾಡಿದರು.

ರಾಜ್ಯಪಾಲ ರಾಮಲಾಲ್‌ನ ಕರ್ಮಕಾಂಡ

— ಎನ್. ಕೆ. ಉಪಾಧ್ಯಾಯ

ಬಹುಮತ ಬೆಂಬಲ ಪಡೆದ ಎನ್. ಟಿ. ರಾಮರಾವ್ ಸರ್ಕಾರವನ್ನು ವಿಸರ್ಜನೆ ಮಾಡಿದ ಆಂಧ್ರ ಪ್ರದೇಶದ ರಾಜ್ಯಪಾಲ ರಾಮಲಾಲ್ ಅವರ ಕರ್ಮಕತೆ ನಾಚಿಕೆಗೇಡಿತನದ್ದಾಗಿದೆ. ಇಂದಿರಾ ಗಾಂಧಿ ಎಂಥೆಂಥವರನ್ನು ಮುಖ್ಯಮಂತ್ರಿಯನ್ನಾಗಿ, ರಾಜ್ಯಪಾಲರನ್ನಾಗಿ ಮಾಡಿ ಪ್ರಜಾಪ್ರಭುತ್ವದ ಕೊಲೆ ಮಾಡಿಸುತ್ತಿದ್ದಾರೆ ತಮ್ಮ ರಾಜಕೀಯ ದುರುದ್ದೇಶಕ್ಕಾಗಿ ಎಂಬ ನಿಜ ಸಂಗತಿ ರಾಮಲಾಲರ ಚರಿತ್ರೆಯಿಂದ ಕಂಡು ಬರುತ್ತದೆ.

ರಾಮಲಾಲ್ ಮಹಾಶಯರು ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದರು. ತಾನು ಮುಖ್ಯಮಂತ್ರಿಯಾಗಿದ್ದಾಗ ತನ್ನ ಮಕ್ಕಳು ಹಾಗೂ ಆಪ್ತರಿಂದ ಕಾನೂನಿಗೆ ವಿರುದ್ಧ ಅರಣ್ಯದ ಮರಗಳನ್ನು ಕಡಿದು ಹಾಕಿ, ಕಟ್ಟಿಗೆಯನ್ನು ಕಳ್ಳಸಾಗಣಿಕೆ ಮಾಡುತ್ತಿದ್ದರು. ಇದರ ಸಂಬಂಧ ಹಲವಾರು ಖಟ್ಲೆಗಳು ಕೋರ್ಟಿನಲ್ಲಿ ಶೀಘ್ರವೇ ದಾಖಲಾಗಲಿವೆ.

ಅದರ ಸಹಾಯದಿಂದ ರಾಮಲಾಲರು ಅವರು 26 ಶಾಸಕರನ್ನು ಪಕ್ಷಾಂತರಗೊಳಿಸಿ 1980 ರಲ್ಲಿ ಸಂಪುಟ ರಚಿಸಿ 1983 ಏಪ್ರಿಲ್ ತಿಂಗಳ ವರೆಗೆ ಅಧಿಕಾರದಲ್ಲಿದ್ದರು. ಈ ಕಾಲಾವಧಿಯಲ್ಲಿ ರೂ. 50 ಕೋಟಿ ಬೆಲೆಯ ಕಟ್ಟಿಗೆ ಕಳ್ಳಸಾಗಣಿಕೆ ಮಾಡಿದ್ದಾರೆಂದು ವರದಿಯಾಗಿದೆ. ಮೊದಲು ಅವರು ಅಧಿಕಾರದಲ್ಲಿದ್ದಾಗ 50 ಕ್ಕೆ ಮೇಲ್ಪಟ್ಟು ಖಟ್ಲೆಗಳನ್ನು ಹೇರಲಾಗಿತ್ತು. ಅವರೇ ಅಧಿಕಾರದಲ್ಲಿದ್ದರಿಂದ ಆ ಖಟ್ಲೆಗಳಿಗೆ ಪುರಾವೆ ಸಿಗುವುದು ಕಷ್ಟವಾದೀತು. ರಾಮಲಾಲ್‌ನಿಗೆ ಅತೀ ಸಮೀಪವರ್ತಿಯಾದ ಕಾಂಗ್ರೆಸ್ ಶಾಸಕರೊಬ್ಬರು ಈ ಖಟ್ಲೆಗಳ ಪರವಾಗಿ ವಾದಿಸುತ್ತಿದ್ದಾರೆ. ಈಗ ಅವರು ಅಧಿಕಾರದಲ್ಲಿಲ್ಲದಿರುವುದರಿಂದ ಸರ್ಕಾರಿ ನೌಕರದಾರರೂ ಮತ್ತು ಸಾಕ್ಷಿದಾರರೆಲ್ಲ ತಮ್ಮ ವಿರುದ್ಧವಾಗುವ ಸಂಭವವಿದೆಂಬ ಭೀತಿ ಅವರನ್ನಾವರಿಸಿದೆ. ವಿಶೇಷ ನ್ಯಾಯಾಧೀಶರಾದ ಸುರ್ಜಿತ್ ಸಿಂಗ್ ಅವರು ತಾವಿತ್ತ ಇತ್ತೀಚಿಗಿನ ನಿರ್ಣಯದಲ್ಲಿ, ಮರಗಳನ್ನು ಕಡಿದ ನಂತರ ಕೂಡ ರಾಮಲಾಲರ ಮಗ ಜಗದೀಶಸಿಂಗ್ ಮತ್ತು ಅವರ ಅಳಿಯ ಪದಮ್ ಸಿಂಗ್ ಅವರು ಕಾಯಿದೆ ವಿರುದ್ಧ ಚಟುವಟಿಕೆಗಳಲ್ಲಿ ತೊಡಗಿದ್ದರೆಂದು ಹೇಳಿದ್ದಾರೆ. ಕೃಷನ್ ಲಾಲ್ ಎಂಬುವನಿಂದ ಕಟ್ಟಿಗೆ ಖರೀದಿ ಮಾಡಿ ರಫ್ತು ಮಾಡುತ್ತಿದ್ದರಂತೆ.

ಪದಮ್ ಸಿಂಗ್ ಮತ್ತು ಜಗದೀಶ ಸಿಂಗ್ ಇವರಿಬ್ಬರೂ ಸರ್ಕಾರಿ ಭೂಮಿಯಲ್ಲಿದ್ದ ಮರಗಳನ್ನು ಕಡಿದು ಕಳವು ಮಾಡಿ ಮತ್ತು ಭ್ರಷ್ಟಾಚಾರಗೈದ ಆರೋಪದ ನಿರ್ಣಯವನ್ನು ಓ. ಪಿ. ಶರ್ಮ ಎಂಬ ನ್ಯಾಯಾಧೀಶರು ನೀಡಿದ್ದಾರೆ. ಅವರು ಕೊನೆ ನಿರ್ಣಯ ನೀಡುವವರು ಮುಂಚೆಯೇ ಅವರನ್ನು ಬದ್ಲಿ ಮಾಡಲಾಯಿತು. ಈ ಕ್ರಮದಿಂದ ಅರಣ್ಯ ಖಾತೆಯಲ್ಲಿ ಕಳ್ಳಸಾಗಣಿಕೆಗೆ ಸಹಾಯ ಮಾಡುವವರಿಗೆಲ್ಲ ಬಹಳ ಆನಂದವಾಗಿ ಕುಣಿದಾಡಿದರು.

ರಾಮಲಾಲರ ಮಗ ಮತ್ತು ಅಳಿಯನಿಗೆ ಸಂಬಂಧಪಟ್ಟ ಮುಖ್ಯ ಖಟ್ಲೆ ಯಾವುದೆಂದರೆ ಮಾಸ್ಟರ್ ರಾಮ್ ಟೆಂಟ್ ಮೊಕದ್ದಮೆ. ರಾಮಲಾಲರಿಗೆ ಹತ್ತಿರದವನಾದ ಅರಣ್ಯ ಕಂಟ್ರ್ಯಾಕ್ಟರ್ ಮಾಸ್ಟರ್ ರಾಮ್ ಟೆಂಟ್ ಎಂಬುವನು ಕಾನೂನು ವಿರುದ್ಧವಾಗಿ ಗಿಡ ಕಡಿದ ಖಟ್ಲೆ, ಜೆ. ಎನ್. ಬರೋವಾಲಿಯಾ ಎಂಬ ನ್ಯಾಯಾಧೀಶ ಲಕ್ಷಾವಧಿ ರೂಪಾಯಿಯ ಮರಗಳನ್ನು ಕಾನೂನು ವಿರುದ್ಧವಾಗಿ ಕಡಿದ ಮಾಸ್ಟರ್ ರಾಮ್ ಟೆಂಟನಿಗೆ, ಬರೇ ರೂ 500 ದಂಡ ತೆತ್ತು ಬಿಡುಗಡೆ ಮಾಡಿದ್ದ. ಇದರ ವಿರುದ್ಧ ಒಬ್ಬ ವ್ಯಕ್ತಿ ಹಿಮಾಚಲ ಪ್ರದೇಶದ ಮುಖ್ಯ ನ್ಯಾಯಾಧೀಶರಿಗೆ ತಕರಾರು ಅರ್ಜಿ ಸಲ್ಲಿಸಿದಾಗ ರಾಮಲಾಲರ ಮಗ ಮತ್ತು ಅಳಿಯ ಅದರಲ್ಲಿ ಶಾಮೀಲಾಗಿರುವ ಸಂಗತಿ ಬೆಳಕಿಗೆ ಬಿತ್ತು. "ಈ ಖಟ್ಲೆಯನ್ನು ಗಂಭೀರವಾಗಿ ಚೌಕಾಶಿ ಮಾಡಿದ್ದಾದರೆ ಮುಖ್ಯಮಂತ್ರಿ ರಾಮಲಾಲರ ಮಗ ಹಾಗೂ ಅಳಿಯನ ಮೇಲೂ ಪರಿಣಾಮ ಉಂಟಾಗುತ್ತದೆಂದು ತಿಳಿದ ಕೂಡಲೇ ಅದನ್ನು ಆಳವಾಗಿ ಹುಗಿಯುವ ಪ್ರಯತ್ನ ಮಾಡಲಾಯಿತೆಂದು" ಮುಖ್ಯ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ಒಂದು ಸಲ ಖಟ್ಲೆ ದಾಖಲಾದರೆ, ಕೋರ್ಟು ಅದರ ಕುರಿತು ನಿರ್ಣಯ ನೀಡಬೇಕು. ಚೌಕಾಶಿ ಮಾಡುವ ಅಧಿಕಾರಿ ಆರೋಪದಲ್ಲಿ ತಥ್ಯವಿಲ್ಲೆಂದು ಹೇಳಿದರೂ ಕೂಡ ಅದನ್ನು ನಂಬುವುದು ಅಥವಾ ಬಿಡುವುದು ನ್ಯಾಯಾಧೀಶರನ್ನವಲಂಬಿಸಿದೆ. ತಮಗೆ ಅನುಕೂಲ ಮಾರ್ಗವನ್ನು ಇದರಲ್ಲಿ ಅನುಸರಿಸಲಾಗಿದೆ. ಅದೇನೆಂದರೆ ತನ್ನ ತಪ್ಪನ್ನು ಕೋರ್ಟಿನ ಮುಂದೆ ಒಪ್ಪಿಕೊಂಡು, ಅಲ್ಪದಂಡ ತುಂಬಿ, ಇದೇ ಖಟ್ಲೆಯನ್ನು ಹುಗಿದಿಡುವುದು ಯೋಗ್ಯವೆಂದು ಇವರೆಲ್ಲ ಮನದಟ್ಟು ಮಾಡಿಕೊಂಡಂತೆ ಕಾಣುತ್ತದೆಂಬ ಅಭಿಪ್ರಾಯವನ್ನು ಮುಖ್ಯ ನ್ಯಾಯಾಧೀಶರು ವ್ಯಕ್ತ ಮಾಡಿದ್ದಾರೆ. ಚೌಕಾಶಿ ಮಾಡುವ ಅಧಿಕಾರಿ; ಸರಕಾರಿ ವಕೀಲ, ಜಾರಿ ಮಾಡುವ ಅಧಿಕಾರಿಗಳೆಲ್ಲ ಒಂದಾದಂತೆ ಕಂಡು ಬರುತ್ತದೆಂದೂ, ಇವರೆಲ್ಲ ಒಟ್ಟಾಗಿ ತಮ್ಮ "ಗಿರಾಕಿಗೆ ಅನುಕೂಲವಾಗುವಂತೆಯೇ ವರ್ತಿಸುತ್ತಾರೆಂದೂ ನ್ಯಾಯಾಧೀಶರು ಆರೋಪಿಸಿದ್ದಾರೆ.

"ಅಷ್ಟೇ ಅಲ್ಲದೆ" ರೂ. 2 ಲಕ್ಷ ಬೆಲೆಯ ಕಟ್ಟಿಗೆಯನ್ನು ಸಿಮ್ಲಾಕ್ಕೆ ರವಾನಿಸಲಾಗಿದೆಂಬ ಆರೋಪ ಹೊರಿಸಲಾಗಿದೆ. ಈ ಕಟ್ಟಿಗೆಯನ್ನು ವಶಪಡಿಸಿಕೊಂಡು ಸರಕಾರಕ್ಕೆ ಒಪ್ಪಿಸಬೇಕಾಗುತ್ತಿತ್ತು. ಆದರೆ ಅದನ್ನು ವಶಪಡಿಸಿಕೊಳ್ಳಲಿಲ್ಲ. ಯಾಕೆಂದರೆ ಆರೋಪಿಯು ಖೊಟ್ಟಿ ಪರ್ಮಿಟಿನ ಮೂಲಕ ಕಟ್ಟಿಗೆಯನ್ನ ಕಳುಹಿಸಿಕೊಟ್ಟಿದ್ದಾನೆ. ಸರಕಾರಿ ವಕೀಲರ ವಾದ ಕೇಳಿದ ನಂತರ ರೂ 500 ದಂಡ ಹಾಕಲಾಯಿತು. ಕೂಡಲೇ ದಂಡ ತೆರಲಾಯಿತು, ಆರೋಪಿಯನ್ನು ಬಿಡುಗಡೆ ಮಾಡಲಾಯಿತು" ಎಂದು ನ್ಯಾಯಾಧೀಶರು ಬೊಟ್ಟು ಮಾಡಿ ತೋರಿಸಿದ್ದಾರೆ.

ಯಾವ ರೀತಿಯಲ್ಲಿ ದಂಡ ಹಾಕಲಾಯಿತೆಂಬುದನ್ನೂ ಕೋರ್ಟಿನ ತೀರ್ಪಿನಲ್ಲಿ ಹೇಳಿದ್ದಾರೆ. 1982 ಏಪ್ರಿಲ್ 26 ರಂದು ಚೌಕಾಶಿ ಮಾಡುವ ಅಧಿಕಾರಿ ಬೆಳಿಗ್ಗೆ 6.45 ಕ್ಕೆ ಥಿಯೋಗ್‌ನಲ್ಲಿ ಆರೋಪಿಗೆ ಭೆಟ್ಟಿಯಾದ. 7 ಗಂಟೆಗೆ ಪ್ರಶ್ನೆ ಹಾಕಿ ಹೇಳಿಕೆ ಬರೆದುಕೊಂಡ, ಆರೋಪಿಯನ್ನು ಬಂಧಿಸಲು ನಿರ್ಣಯಿಸಲಾಯಿತು. ಜಾಮೀನ ಕೊಡಬೇಕೆಂದು ಕೇಳಲಾಯಿತು ಆದರೆ ಜಾಮೀನು ಕೊಡುವ ಪರಿಸ್ಥಿತಿಯಲ್ಲಿ ಅವನಿರಲಿಲ್ಲ. ಆದ್ದರಿಂದ ಕೂಡಲೇ ಅವನನ್ನು ಥಿಯೋಗದಲ್ಲಿ ನ್ಯಾಯಾಧೀಶರೆದುರು ಹಾಜರ ಪಡಿಸಲಾಯಿತು. ಸರಕಾರಿ ವಕೀಲ ಆರ್. ಕೆ. ಬಾಗಲ್ ಎಂಬುವನು ಸಿಮ್ಲಾದಿಂದ ಅದೇ ಸಮಯದಲ್ಲಿ ಥಿಯೋಗದಲ್ಲಿ ಹಾಜರಾದ. [ಸಿಮ್ಲಾದಿಂದ ಥಿಯೋಗಕ್ಕೆ ಕಾರಿನಲ್ಲಿ ಒಂದು ಗಂಟೆ ಪ್ರಯಾಣ]. ಆರೋಪಿ ತಪ್ಪನೊಪ್ಪಿಕೊಂಡ. ರೂ 500 ದಂಡ ಹಾಕಲಾಯಿತು. ಇದು ರಾಮಲಾಲ್ ರಾಜ್ಯದಲ್ಲಿ ದಿನ ನಿತ್ಯ ನಡೆಯುತ್ತಿರುವ ನಾಟಕದ ಒಂದಂಕ ಮಾತ್ರ.

ಅಧಿಕಾರಿಗಳು ಈ ರೀತಿ ತುರಾತುರಿ ಮಾಡಿದ್ದು ಯಾಕೆ ಗೊತ್ತೆ. ನ್ಯಾಯಾಧೀಶರ ಹೇಳಿಕೆಯಂತೆ ಮುಖ್ಯಮಂತ್ರಿ ರಾಮಲಾಲನ ಮಗನಿಗೂ—ಅಳಿಯನಿಗೂ ಆರೋಪಿಗೂ ನಿಕಟ ಸಂಬಂಧವಿದೆ. ಒಪ್ಪಂದ ಮಾಡಿಕೊಳ್ಳುವ ಸಲುವಾಗಿಯೇ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆಂದು ನ್ಯಾಯಾಧೀಶರು ಹೇಳಿದ್ದಾರೆ.

ಅರಣ್ಯದ ಮರ ಕಡಿಯುವ, ಅದನ್ನು ಕಳ್ಳಸಾಗಣಿಕೆ ಮಾಡುವ ಹಲವಾರು ತಕರಾರುಗಳು ಬಂದ ನಂತರ ರಾಮಲಾಲನನ್ನ ಮುಖ್ಯಮಂತ್ರಿ ಸ್ಥಾನದಿಂದ ತೆಗೆದು ಆಂಧ್ರದ ರಾಜ್ಯಪಾಲರನ್ನಾಗಿ ನೇಮಿಸಲಾಯಿತು. ಸಿಮ್ಲಾದಂತೆ ಆಂಧ್ರದಲ್ಲಿ ಮರ ಕಡಿಯಲು ಸಿಗುತ್ತಿಲ್ಲ. ಆದ್ದರಿಂದ ಕುಖ್ಯಾತ ಮರ ಕಳ್ಳಸಾಗಣಿಕೆಗಾರ ರಾಮಲಾಲ್ ಮನುಷ್ಯರನ್ನು ಕಡಿದು ಕಳ್ಳಸಾಗಣಿಕೆ ಮಾಡಿ ಭಾಸ್ಕರ ರಾವ್ ಅವರ ಬುಟ್ಟಿಗೆ ಹಾಕಲು ಪ್ರಾರಂಭಿಸಿದ್ದಾನೆ. ಆಂಧ್ರದ ಜಾಗೃತ ಜನತೆ ಮಾತ್ರ ಕಳ್ಳಸಾಗಣಿಕೆಗೆ ಅವಕಾಶ ಮಾಡಿಕೊಡುವುದಿಲ್ಲವಷ್ಟೇ ಅಲ್ಲ ರಾಮಲಾಲನನ್ನ ರಾಮರಾಜ್ಯಕ್ಕೆ ಹಾರಿಸಲು ಸಿದ್ಧತೆ ಮಾಡುತ್ತಿದ್ದಾರೆ.

★

ಮಳೆಗಾಲದ ಇರುಳು

ಬಾಗಿಲ ಬಳಿ
ಬಂದೂಕು ಹಿಡಿದ ಕಾವಲುಗಾರರು
ಸೆರೆಮನೆಯ ಮೇಲೆ
ಚಂದ್ರನೊಂದಿಗೆ ಸಾಗುವ ತುಣುಕು ಮೋಡಗಳು
ಟ್ಯಾಂಕುಗಳಂತೆ ಮುಂದೊತ್ತಿ ಬರುವ ತಿಗಣೆಗಳು
ವಾಯುಪಡೆಯ ವಿಮಾನಗಳಂತೆ
ಆಕ್ರಮಣ ನಡೆಸುವ ಸೊಳ್ಳೆಗಳು
ಈ ಮಧ್ಯೆ ನನ್ನ ಹೃದಯ ಹಾರಿ ಹೋಗುತ್ತದೆ
ಸಾವಿರಾರು ಮೈಲಿಗಳಾಚೆಗಿನ
ನನ್ನ ದೇಶಕ್ಕೆ,

ದುಃಖಗಳು ನನ್ನ ಕನಸುಗಳನ್ನು
ಸಾವಿರ ಸಿಕ್ಕುಗಳಲ್ಲಿ ಇರುಕಿ ಫಾಸಿ ಗೊಳಿಸುತ್ತಿದೆ
ನಿರಪರಾಧಿ, ನಿರಪರಾಧಿ ನಾನು
ಆದರೂ ಇಡೀ ವರ್ಷ ಸೆರೆಮನೆಯ ಕತ್ತಲಲ್ಲಿ
ತುಡಿಯುತ್ತಿದ್ದೇನೆ, ಬೆಳಕಿನ ಕಿರಣಗಳಿಗಾಗಿ

ಉರುಳುವ ಕಣ್ಣೀರ ಹನಿ
ಲೇಖನಿಗೆ ಉಸಿರು ತುಂಬಿದಾಗ
ಬರೆಯುತ್ತೇನೆ ನಾನು
ಕವಿತೆಗಳನ್ನು
ಸೆರೆಮನೆಯ ಕುರಿತು
ನಿರ್ಬಂಧಗಳ ಕುರಿತು
ನನ್ನ ದುಃಖಕ್ಕೆ ಕಾರಣವಾಗಿರುವ
ಅಮಾನುಷ
ಗುಲಾಮತನದ ಕುರಿತು.

ಭಾವಾನುವಾದ : 'ಉದಯ' — ಹೋ ಚಿ ಮಿನ್

ವಿಯೆಟ್ನಾಂ ವಿಮೋಚನಾ ಹೋರಾಟದ ಮಹಾನ್ ನಾಯಕರಾಗಿದ್ದ ಹೋಚಿಮಿನ್ 1969 ರ ಸೆಪ್ಟೆಂಬರ್ 3 ರಂದು ಮರಣಿಸಿದರು. ದಕ್ಷಿಣ ಚೀನಾದಲ್ಲಿ ಚಿಯಾಂಗ್ ಕೈಷೇಕ್‌ನ ಆಡಳಿತ ಹೋಚಿಮಿನ್‌ರನ್ನು 1942–43 ರಲ್ಲಿ ಕ್ರೂರ ಬಂಧನದಲ್ಲಿರಿಸಿದ ಕಾಲಾವಧಿಯಲ್ಲಿ ಅವರು ಅಸಂಖ್ಯ ಕವಿತೆಗಳನ್ನು ರಚಿಸಿದ್ದು ಅವುಗಳಲ್ಲೊಂದರ ಅನುವಾದ ಇದು.

ಗಣೇಶ ಬೀಡಿ ಬ್ರಾಂಚಿನ ಮಹಾಸಭೆ

ಪಕ್ಕಲಡ್ಕ ಗಣೇಶ ಬೀಡಿ ಬ್ರಾಂಚಿನ ಮಹಾಸಭೆಯು 15-8-84 ರಂದು ಆಂಧ್ರ ಪ್ರದೇಶ ಬೀಡಿ ಲೇಬರ್ ಯುನಿಯನಿನ ಅಧ್ಯಕ್ಷರಾದ ಕೆ. ಓ. ಸಾಲಿಯನ್ ರವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ದೇವದಾಸ್ ಕೊಟ್ಯಾನ್ ರವರು ಹಿಂದಿನ ವರ್ಷದ ಲೆಕ್ಕ ಪತ್ರವನ್ನು ಸಭೆಯ ಮುಂದಿಟ್ಟರು ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಮುಂದಿನ ವರ್ಷಕ್ಕೆ ಕೆ. ತಿಮ್ಮಪ್ಪನವರು ಕಾರ್ಯದರ್ಶಿಯಾಗಿರುವ 11 ಮಂದಿಯ ಕಾರ್ಯಕಾರಿ ಸಮಿತಿಯನ್ನು ಸಭೆಯು ಸರ್ವಾನುಮತದಿಂದ ಆರಿಸಿತು.

ರಾಷ್ಟ್ರ ಮತ್ತು ರಾಷ್ಟ್ರೀಯತೆ - ಮಾರ್ಕ್ಸ್‌ವಾದಿಗಳ ದೃಷ್ಟಿಯಲ್ಲಿ

— ಬಿ. ಟಿ. ರಣದಿವೆ

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಕ್ರಾಂತಿಕಾರೀ ಒಳದೃಷ್ಟಿ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪ್ರಶ್ನೆಯ ಪರಿಹಾರಕ್ಕೂ ಖಾಸಗೀ ಆಸ್ತಿಯ ರದ್ಧತಿಗೂ ನೇರ ಸಂಬಂಧವಿದೆ ಎಂಬ ತೀರ್ಮಾನಕ್ಕೆ ಅವರನ್ನು ತಂದಿತು. ಖಾಸಗೀ ಆಸ್ತಿ ರದ್ಧಾಗದೆ ಈ ಪ್ರಶ್ನೆಯ ಪರಿಹಾರ ಅಂದರೆ ರಾಷ್ಟ್ರಗಳ ನಡುವೆ ಸಂಪೂರ್ಣ ಸಮಾನತೆ ಸಾಧ್ಯವಿರಲಿಲ್ಲ. 1847 ರಲ್ಲಾಗಲೇ ಮಾರ್ಕ್ಸ್, "ಜನಗಳಿಗೆ ನಿಜವಾಗಿಯೂ ಒಂದಾಗಲು ಸಾಮರ್ಥ್ಯ ಬರಬೇಕಾದರೆ ಅವರ ಹಿತಾಸಕ್ತಿಗಳು ಸಮಾನವಾಗ ಬೇಕಾಗುತ್ತದೆ. ಅವರ ಹಿತಾಸಕ್ತಿಗಳು ಸಮಾನವಾಗಬೇಕೆಂದಿದ್ದರೆ ಸದ್ಯದ ಆಸ್ತಿ ಸಂಬಂಧಗಳನ್ನು ಇಲ್ಲವಾಗಿಸಬೇಕು ಯಾಕೆಂದರೆ ಕೆಲವು ದೇಶಗಳಿಂದ ಇನ್ನೂ ಕೆಲವು ದೇಶಗಳ ಶೋಷಣೆ, ಈ ಆಸ್ತಿ ಸಂಬಂಧಗಳಲ್ಲಿ ಅಡಕವಾಗಿದೆ ಸದ್ಯದ ಆಸ್ತಿ ಸಂಬಂಧಗಳನ್ನು ತೊಡೆದು ಹಾಕುವ ಬಗ್ಗೆ ಕೇವಲ ಕಾರ್ಮಿಕ ವರ್ಗಕ್ಕಷ್ಟೇ ಆಸಕ್ತಿಯಿದೆ. ಮತ್ತು ಇದನ್ನು ಮಾಡುವ ಸಾಧನಗಳು ಕೂಡ ಕೇವಲ ಅದರ ಬಳಿಯಷ್ಟೇ ಇದೆ. ಆದ್ದರಿಂದ ಬೂರ್ಜ್ವಾ ವರ್ಗದ ಮೇಲೆ ಕಾರ್ಮಿಕ ವರ್ಗದ ವಿಜಯ ಅದೇ ಸಮಯದಲ್ಲಿ ದಮನಕ್ಕೊಳಗಾದ ಎಲ್ಲಾ ರಾಷ್ಟ್ರಗಳ ವಿಮೋಚನೆಯ ನಿಶಾನೆ ಕೂಡ" ಎಂದು ಹೇಳಿದ್ದರು (ಕಾರ್ಲ್ ಮಾರ್ಕ್ಸ್, "Speech On Poland" collected Works ಸಂಪುಟ 6, ಪುಟ 388)

ಮಾರ್ಕ್ಸ್ ಇಲ್ಲಿ ತನ್ನ ಕಾಲದ ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಹೇಳುತ್ತಿದ್ದರೂ ಆತ ಒಂದು ಪರಮ ಚಾರಿತ್ರಿಕ ಸತ್ಯವನ್ನು ಉಸುರುತ್ತಿದ್ದಾರೆ. ತದನಂತರದ ರಶಿಯನ್ ಕ್ರಾಂತಿ ಇದನ್ನು ರುಜುವಾತು ಪಡಿಸಿತು. ಕಳೆದ ವರ್ಷ ಆಚರಿಸಿದ ಸೋವಿಯತ್ ಸಂಘದ ಸ್ಥಾಪನೆಯ ಅರವತ್ತನೇ ವಾರ್ಷಿಕೋತ್ಸವ ಸಮಾರಂಭ ಕತೆಯ ಆಧಾರದ ಮೇಲೆ ರಾಷ್ಟ್ರೀಯತೆಯ ಪ್ರಶ್ನೆಯ ಪರಿಹಾರದತ್ತ ಗಮನ ಸೆಳೆದಿದೆ. ಅಲ್ಲಿ ಅದು ಸಾಧ್ಯವಾಯಿತು. ಏಕೆಂದರೆ ಸಮಾಜವಾದ ಅಸ್ತಿತ್ವದಲ್ಲಿದ್ದ ಆಸ್ತಿ ಸಂಬಂಧಗಳನ್ನು ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಒಡೆತನವನ್ನು-ತೊಡೆದು ಹಾಕಿತ್ತು. ಶತಮಾನದ ಅನುಭವ ಕೂಡ ರಾಷ್ಟ್ರಗಳ ನಡುವೆ ಸಮಾನತೆ, ರಾಷ್ಟ್ರ ಸಮಸ್ಯೆಯ ಪರಿಹಾರ ಸಮಾಜವಾದ ಸ್ಥಾಪನೆಗೊಂಡಲ್ಲಿ ಮಾತ್ರ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ. ಬಂಡವಾಳಶಾಹೀ ಚೌಕಟ್ಟಿನೊಳಗೆ ಮುಂದುವರಿದ ದೇಶಗಳಿಗೆ ಈ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಾಗಲಿಲ್ಲ. ರಾಷ್ಟ್ರೀಯ ವೈರಭಾವಗಳು ಮತ್ತು ರಾಷ್ಟ್ರೀಯ ಪ್ರತ್ಯೇಕತೆಯು ಬಹು ರಾಷ್ಟ್ರೀಯತೆಗಳುಳ್ಳ ರಾಷ್ಟ್ರಗಳನ್ನು ಅಥವಾ ದೇಶಗಳನ್ನು ಪೀಡಿಸುತ್ತಲೇ ಇವೆ. ಭಾರತವೂ ಸೇರಿದಂತೆ ತೃತೀಯ ಜಗತ್ತಿನ ಹಲವು ದೇಶಗಳು ಈ ಸಮಸ್ಯೆಯನ್ನು ಎದುರಿಸುತ್ತಿವೆ.

ತಪ್ಪು ಭಾವನೆ

ಬಹಳಷ್ಟು ಜನ ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಮಾರ್ಕ್ಸ್‌ವಾದಿಗಳ ನಿಲುವನ್ನು ತಪ್ಪಾಗಿ ಪ್ರತ್ಯೇಕಗೊಳ್ಳುವುದು, ವಿಯೋಜನೆ ಎಂದು ಗುರುತಿಸುತ್ತಾರೆ. ಇದು ಸಂಪೂರ್ಣವಾಗಿ ತಪ್ಪು. ಮಾರ್ಕ್ಸ್‌ವಾದ, ಕಾರ್ಮಿಕ ವರ್ಗದ ಈ ಸಿದ್ಧಾಂತದ ದೃಷ್ಟಿಕೋನ, ಅಂತರಾಷ್ಟ್ರೀಯ ದೃಷ್ಟಿಕೋನ. ಜಗತ್ತಿನ ಕಾರ್ಮಿಕ ವರ್ಗದ ಐಕ್ಯತೆ ಸಾಧಿಸಿ, ಅಂತಿಮವಾಗಿ ಜಗತ್ತು ಒಂದಾಗಬೇಕೆಂದು ಅದು ಅಪೇಕ್ಷಿಸುತ್ತದೆ. ಹೀಗಿರುವಾಗ ಅದು ಪ್ರತ್ಯೇಕತೆಯನ್ನ ಆಧರಿಸಿರಲು ಸಾಧ್ಯವಿಲ್ಲ. ಲೆನಿನ್‌ರ ಈ ಮುಂದಿನ ಮಾತುಗಳು ಈ ಪ್ರಶ್ನೆಯ ಕುರಿತಾದ ಸರಿಯಾದ ದೃಷ್ಟಿಕೋನವನ್ನು ಪ್ರಸ್ತುತಗೊಳಿಸುತ್ತವೆ. "ಕಾರ್ಮಿಕ ವರ್ಗದ ಪಕ್ಷ ಸಾಧ್ಯವಾದಷ್ಟು ದೊಡ್ಡ ಪ್ರಭುತ್ವವನ್ನು ಸೃಷ್ಟಿಸಲು ಹೆಣಗುತ್ತದೆ. ಯಾಕೆಂದರೆ ಇದು ದುಡಿಯುವ ಜನತೆಗೆ ಪ್ರಯೋಜನಕಾರಿ; ಅದು ರಾಷ್ಟ್ರಗಳನ್ನು ಮತ್ತಷ್ಟು ಸಮೀಪ ತಂದು ಅವುಗಳು ಹೆಚ್ಚೆಚ್ಚು ಬೆಸೆದುಕೊಳ್ಳುವಂತೆ ಯತ್ನಿಸುತ್ತದೆ; ಆದರೆ ಅದು ಈ ಉದ್ದೇಶವನ್ನು ಹಿಂಸೆಯ ಮೂಲಕ ಸಾಧಿಸ ಬಯಸುವುದಿಲ್ಲ. ಬದಲಿಗೆ ಎಲ್ಲಾ ರಾಷ್ಟ್ರಗಳ ಕಾರ್ಮಿಕರ ಮತ್ತು ದುಡಿಯುವ ಜನಗಳ ಒಂದು ಅನಿರ್ಬಂಧಿತ, ಸೋದರ ಒಕ್ಕೂಟದ ಮೂಲಕವಷ್ಟೇ ಇದನ್ನು ಸಾಧಿಸ ಬಯಸುತ್ತದೆ." [Collected Works, ಸಂಪುಟ 24, ಪುಟ 73]

ಇದು ರಾಷ್ಟ್ರೀಯತೆಗಳ ಪ್ರಶ್ನೆ ಕುರಿತಾದಂತೆ ಮಾರ್ಕ್ಸ್‌ವಾದ- ಲೆನಿನ್ ವಾದದ ನಿಲುವು. ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಐಕ್ಯತೆಯನ್ನೂ ಮತ್ತು ಸ್ವಾತಂತ್ರ್ಯ ಹಾಗೂ ಸಮಾನತೆಯ ಮೂಲಕ ರಾಷ್ಟ್ರೀಯ ಗುಂಪುಗಳ (Nationalities) ಒಂದು ಸ್ವಯಂಪ್ರೇರಿತ ಒಕ್ಕೂಟದ ರಚನೆಯನ್ನ ಪರಸ್ಪರ ಮೇಳವಿಸುವ ನಿಲುವು ಇದು.

ಅಮೂರ್ತ ಪರಿಶೀಲನೆ ಅಲ್ಲ

ಆರಂಭದಿಂದಲೇ, ಕ್ರಾಂತಿಕಾರಿ ಹೋರಾಟದ ಅವಧಿಯಲ್ಲಿಯೇ ಕಾರ್ಮಿಕವರ್ಗದ ಪಕ್ಷ ಈ ಪ್ರಶ್ನೆಯ ಬಗ್ಗೆ ಸರಿಯಾದ ಗ್ರಹಿಕೆ ಮತ್ತು ನಿಲುವು ಹೊಂದಿರದಿದ್ದರೆ ಈ ರೀತಿಯ ಸ್ವಯಂಪ್ರೇರಿತ ಒಕ್ಕೂಟದ ಸಾಧನೆ ಸಾಧ್ಯವಿಲ್ಲ. ಬೊಲ್ಶೆವಿಕ್ ಪಕ್ಷ ಲೆನಿನ್‌ರ ಮಾರ್ಗದರ್ಶನದಲ್ಲಿ ದೃಢಪೂರ್ವಕವಾಗಿ ಕ್ರಾಂತಿಯ ವರುಷಗಳಲ್ಲಿ ಈ ನಿಲುವನ್ನು ತಳೆದುದರಿಂದಾಗಿಯೇ ಅದಕ್ಕೆ ಅಕ್ಟೋಬರ್ ಕ್ರಾಂತಿಯ ಸಫಲತೆಯ ನಂತರ ದಮನಕ್ಕೊಳಗಾದ ರಾಷ್ಟ್ರೀಯ ಗುಂಪುಗಳ ವಿಶ್ವಾಸ ಗಳಿಸಲು ಸಾಧ್ಯವಾಯಿತು.

ರಷ್ಯಾದಲ್ಲಿ ಜಾರ್ ಆಡಳಿತದಲ್ಲಿ ಹಲವಾರು ರಾಷ್ಟ್ರಗಳು ದಮನಕ್ಕೊಳಗಾಗಿದ್ದವು. ಆದ್ದರಿಂದ ಈ ರಾಷ್ಟ್ರೀಯತೆಗಳ ಹಕ್ಕುಗಳನ್ನು ಮತ್ತು ಸಮಾನತೆಯನ್ನು ರಕ್ಷಿಸುವುದರೊಂದಿಗೇ ಎಲ್ಲಾ ರಾಷ್ಟ್ರೀಯ ಗುಂಪುಗಳ ಕಾರ್ಮಿಕರ ವರ್ಗ ಐಕ್ಯತೆಯನ್ನು ಕಾಯ್ದುಕೊಳ್ಳುವುದು ಹೇಗೆ ಎಂಬುದು ಅಲ್ಲಿಯ ಸಮಸ್ಯೆಯಾಗಿತ್ತು.

ಭಾರತದ ಪ್ರಜಾಪ್ರಭುತ್ವವಾದೀ ಚಳವಳಿ, ಮತ್ತು ಕಾರ್ಮಿಕ ವರ್ಗದ ಆಂದೋಲನ ಈಗ ಎದುರಿಸುತ್ತಿರುವ ಒಂದು ಮುಖ್ಯ ಸಮಸ್ಯೆಯೆಂದರೆ ವಿಚ್ಛಿದ್ರಕಾರೀ ಶಕ್ತಿಗಳ ಬೆಳವಣಿಗೆ. ಇದರ ವಿರುದ್ಧ ಹೋರಾಡಿ ದೇಶದ ಸಮಗ್ರತೆಯನ್ನು ಉಳಿಸಿ, ಪ್ರಜಾಪ್ರಭುತ್ವವಾದೀ ಮತ್ತು ಕಾರ್ಮಿಕ ವರ್ಗದ ಆಂದೋಲನಗಳು ಮುನ್ನಡೆ ಸಾಧಿಸಲು ಸಾಧ್ಯವಾಗಬೇಕಾದರೆ ಈ ಸಮಸ್ಯೆಯನ್ನು ಕೂಲಂಕುಷವಾಗಿ ಅರ್ಥ ಮಾಡಿಕೊಳ್ಳಬೇಕು ಈ ಉದ್ದೇಶದಿಂದ ಸಿಪಿಐ (ಎಂ) ನ ಸೈದ್ಧಾಂತಿಕ ಪತ್ರಿಕೆ "ದಿ ಮಾರ್ಕ್ಸಿಸ್ಟ್" ನಲ್ಲಿ ಪ್ರಕಟವಾದ ಕಾ. ಬಿ. ಟಿ ರಣದಿವೆಯವರ ಲೇಖನ "Marxism And Nationalities Question in India" ಎಂಬ ದೀರ್ಘ ಲೇಖನದ ಕನ್ನಡ ಅನುವಾದವನ್ನು ಈ ಸಂಚಿಕೆಯಿಂದ ಆರಂಭಿಸುತ್ತಿದ್ದೇವೆ.

ಇಲ್ಲಿ ಪ್ರಕಟವಾಗಿರುವ ಮೊದಲ ಕಂತಿನಲ್ಲಿ ಈ ಪ್ರಶ್ನೆಯ ಬಗ್ಗೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್ ವಿಕಾಸಗೊಳಿಸಿದ ಮಾರ್ಕ್ಸ್‌ವಾದೀ – ಲೆನಿನ್‌ವಾದೀ ದೃಷ್ಟಿಕೋನವನ್ನು ಸಂಕ್ಷಿಪ್ತ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ.

ಭಾರತದಲ್ಲಿ ರಾಷ್ಟ್ರೀಯತೆಯ ಹಕ್ಕುಗಳ ಸಮರಶೀಲ ಪ್ರತಿಪಾದಕರು ಕೆಲವರು ಕಾರ್ಮಿಕ ವರ್ಗದ ಐಕ್ಯತೆಯ, ಎಲ್ಲಾ ರಾಷ್ಟ್ರೀಯ ಗುಂಪುಗಳ ಕಾರ್ಮಿಕರ ಐಕ್ಯತೆಯ ಅಗತ್ಯವನ್ನು ಮರೆತು ಬಿಟ್ಟು ತಮ್ಮ ಒತ್ತಾಯವನ್ನು ಒಂದು ಸಂಕುಚಿತ ದೃಷ್ಟಿಯ ಪ್ರತ್ಯೇಕತಾವಾದಿ ಬೇಡಿಕೆಯಾಗಿ ಪರಿವರ್ತಿಸಿ ಬಿಡುತ್ತಾರೆ.

ಇನ್ನೊಂದು ನೆನಪಿನಲ್ಲಿಡಬೇಕಾದ ಅಂಶವೇನೆಂದರೆ ಮಾರ್ಕ್ಸ್‌ವಾದ ರಾಷ್ಟ್ರೀಯತೆ ಸಮಸ್ಯೆಯ ಪರಿಹಾರವನ್ನು ಅಮೂರ್ತವಾದ ರೀತಿಯಲ್ಲಿ ಪರಿಶೀಲಿಸುವುದಿಲ್ಲ, ಸಾಮಾಜಿಕ ಬೆಳವಣಿಗೆಯ ಸದ್ಯದ ಘಟ್ಟದ, ವರ್ಗ ಹೋರಾಟದ ಸಂದರ್ಭದಲ್ಲಿ ಪರಿಶೀಲಿಸುತ್ತದೆ; ಮತ್ತು ಈ ಸಮಸ್ಯೆಗೆ ನೀಡುವ ಮಹತ್ವ ಸಾರ್ವತ್ರಿಕ ಸಾಮಾಜಿಕ ಹೋರಾಟದಲ್ಲಿ, ನಮ್ಮ ಕಾಲದ ವರ್ಗ ಹೋರಾಟದಲ್ಲಿ ಅದು ವಹಿಸುವ ಪಾತ್ರದ ಅನುಪಾತದಲ್ಲಿರುತ್ತದೆ.

ನೇರ ಸಂಬಂಧ

ಅಂತರಾಷ್ಟ್ರೀಯ ದುಡಿಯುವ ವ್ಯಕ್ತಿಗಳ ಸಂಘದ ತಾತ್ಕಾಲಿಕ- ಜನರಲ್ ಕೌನ್ಸಿಲಿನ ಪ್ರತಿನಿಧಿಗಳಿಗೆ 1866 ರಲ್ಲಿ ಬರೆದ ಸೂಚನೆಗಳಲ್ಲಿ "ಪೋಲಂಡಿನ ಪ್ರಶ್ನೆ" ಎಂಬ ಶೀರ್ಷಿಕೆಯಡಿಯಲ್ಲಿ ಮಾರ್ಕ್ಸ್ ಹೀಗೆ ಬರೆದಿದ್ದರು —

1. ಯುರೋಪಿನ ದುಡಿಯುವ ಜನ ಈ ಪ್ರಶ್ನೆಯನ್ನೇಕೆ ಎತ್ತಿಕೊಳ್ಳಬೇಕು? ಮೊದಲನೆಯದಾಗಿ, ಯಾಕೆಂದರೆ ಮಧ್ಯಮ ವರ್ಗದ ಲೇಖಕರು ಹಾಗೂ ಚಳುವಳಿಗಾರರು ಈ ಖಂಡದಲ್ಲಿ, ಐರ್ಲೆಂಡಿನಲ್ಲಿಯೂ ಎಲ್ಲಾ ರೀತಿಯ ರಾಷ್ಟ್ರೀಯ ಗುಂಪುಗಳ ಪೋಷಕರಾಗಿದ್ದರೂ ಕೂಡಾ ಈ ಪ್ರಶ್ನೆಯನ್ನು ಅದುಮಿಡುವ ಸಂಚು ಹೂಡುತ್ತಿದ್ದಾರೆ. ಈ ಮಿತಭಾಷಿತ್ವ ಯಾಕಾಗಿ ಬಂತು? ಯಾಕೆಂದರೆ, ಶ್ರೀಮಂತರು ಮತ್ತು ಬೂರ್ಜ್ವಾಗಳು ಇಬ್ಬರೂ ಹಿನ್ನೆಲೆಯಲ್ಲಿರುವ ಮಸುಕಾದ ಏಷ್ಯಾಟಿಕ್ ಶಕ್ತಿಯನ್ನು ಕಾರ್ಮಿಕ ವರ್ಗದ ಉಚ್ಛ್ರಾಯದ ಭರತದ ವಿರುದ್ಧ ಕೊನೆಯ ಸಂಪನ್ಮೂಲವಾಗಿ ಕಾಣುತ್ತಾರೆ. ಆ ಶಕ್ತಿಯನ್ನು ಪರಿಣಾಮಕಾರಿಯಾಗಿ ಅಡಗಿಸಿ ಬಿಡುವುದು ಪೋಲಂಡನ್ನು ಒಂದು ಪ್ರಜಾಸತ್ತಾತ್ಮಕ ಆಧಾರದ ಮೇಲೆ ಪುನರ್ನೆಲೆಗೊಳಿಸುವುದರಿಂದ ಮಾತ್ರ ಸಾಧ್ಯ.

2. ಮಧ್ಯ ಯುರೋಪಿನ, ವಿಶೇಷವಾಗಿ ಜರ್ಮನಿಯ ಈಗಿನ ಬದಲಾದ ಸ್ಥಿತಿಯಲ್ಲಿ, ಒಂದು ಪ್ರಜಾಪ್ರಭುತ್ವವಾದೀ ಪೋಲಂಡು ಇರಬೇಕಾದುದು ಹಿಂದೆಂದಿಗಿಂತಲೂ ಹೆಚ್ಚು ಆವಶ್ಯಕ. ಅದಿಲ್ಲದಿದ್ದರೆ ಜರ್ಮನಿ "ಪವಿತ್ರ ಕೂಟ" ದ ಕೋಟೆಯು ಮುಂಗಟ್ಟಡವಾಗುತ್ತದೆ. ಅದಿದ್ದರೆ, ಜರ್ಮನಿ ಗಣತಂತ್ರವಾದಿ ಫ್ರಾನ್ಸ್‌ನ ಸಹಕಾರಿಯಾಗುತ್ತದೆ. ಈ ಮಹಾನ್ ಯುರೋಪಿಯನ್ ಪ್ರಶ್ನೆಯನ್ನು ಮುಕ್ತಾಯಗೊಳಿಸುವವರೆಗೆ ಕಾರ್ಮಿಕ ವರ್ಗದ ಆಂದೋಲನದಲ್ಲಿ ಸತತವಾಗಿ ತಡೆಯುಂಟಾಗುತ್ತದೆ, ಅಡ್ಡಿಯುಂಟಾಗುತ್ತದೆ ಮತ್ತು ವಿಳಂಬವುಂಟಾಗುತ್ತದೆ. [ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್- "Selected Works" ಸಂಪುಟ 2, ಪುಟ 84]

ಸ್ವಯಂ ನಿರ್ಧಾರದ ಹಕ್ಕು

ಪೋಲೆಂಡಿನ ಪ್ರಶ್ನೆಗೂ ಯುರೋಪಿನ ಕಾರ್ಮಿಕ ವರ್ಗದ ಬೆಳವಣಿಗೆಗೂ ನೇರ ಸಂಬಂಧವಿತ್ತು. ಆದ್ದರಿಂದಲೇ ಅದಕ್ಕೆ ಅಷ್ಟೊಂದು ಮಹತ್ವ. ಅತ್ತ ಜಾರ್‌ಶಾಹಿಯ ರಷ್ಯಾದಲ್ಲಿ ದಮನ ನಡೆಸುವ ರಾಷ್ಟ್ರಗಳು ಮತ್ತು ದಮನಕ್ಕೊಳಗಾದ ರಾಷ್ಟ್ರಗಳು ಎಂಬ ಹಿಂಸಕ–ಹಿಂಸಿತ ಸಂಬಂಧಗಳಿದ್ದವು. ಆದ್ದರಿಂದ ಮಾರ್ಕ್ಸ್‌ವಾದ – ಲೆನಿನ್‌ವಾದ ದಮನಕ್ಕೊಳಗಾದ ದೇಶಗಳಿಗೆ ಸ್ವಯಂನಿರ್ಧಾರದ ಹಕ್ಕಿರಬೇಕೆಂದು ಪ್ರತಿಪಾದಿಸಿ ಅದಕ್ಕಾಗಿ ಹೋರಾಡಿತು. ರಷ್ಯಾದ ಕ್ರಾಂತಿಯ ಅವಧಿಯಲ್ಲೆಲ್ಲಾ ಲೆನಿನ್ ನೇತೃತ್ವದ ಬೋಲ್ಶೆವಿಕ್ ಪಕ್ಷ ಈ ಹಕ್ಕುಗಳಿಗಾಗಿ ಹೋರಾಡಿತು. ಕಾರ್ಮಿಕವರ್ಗದ ಆಂದೋಳನದಲ್ಲಿದ್ದು ಸ್ವಯಂ ನಿರ್ಧಾರವನ್ನು ಒಂದಿಲ್ಲೊಂದು ರೀತಿಯಲ್ಲಿ ವಿರೋಧಿಸಿದ ಮಹಾನ್ ರಶಿಯನ್ ಸಂಕುಚಿತವಾದಿಗಳಿಗೆ ಮತ್ತು ಸಮಯಸಾಧಕರಿಗೆ ಛೀಮಾರಿ ಹಾಕಿತು. ಆದರೆ ಇದರರ್ಥ ಬೋಲ್ಶೆವಿಕ್‌ರು ಪ್ರತ್ಯೇಕತೆ ಅಥವಾ ವಿಯೋಜನೆಯ ಪರವಾಗಿ ದುಡಿದರು ಎಂದಾಗುವುದಿಲ್ಲ. ಸ್ವಯಂ-ನಿರ್ಧಾರವನ್ನು ಪ್ರತಿಪಾದಿಸಿ ಬೋಲ್ಶೆವಿಕರು ತಮ್ಮದು ಎಲ್ಲಾ ರೀತಿಯ ರಾಷ್ಟ್ರೀಯ ವಿಶೇಷಾಧಿಕಾರಿಗಳನ್ನು ಮತ್ತು ದಮನವನ್ನು ತೊಡೆದು ಹಾಕುವ ಮತ್ತು ಸಂಪೂರ್ಣ ಸಮಾನತೆಯ ನಿಲುವು ಎಂಬುದನ್ನು ದಮನಕ್ಕೊಳಗಾದ ರಾಷ್ಟ್ರೀಯ ಗುಂಪುಗಳಿಗೆ ಮನದಟ್ಟು ಮಾಡಿಸಿದರು. ಅದೇ ಹೊತ್ತಿನಲ್ಲಿ ಎಲ್ಲಾ ರಾಷ್ಟ್ರೀಯತೆಗಳಿಗೆ ದಮನ ನಡೆಸುತ್ತಿದ್ದ ಮತ್ತು ದಮನಕ್ಕೊಳಗಾದ ರಾಷ್ಟ್ರೀಯ ಗುಂಪುಗಳಿಗೆ ಸೇರಿದ ಕಾರ್ಮಿಕರುಳ್ಳ ಕಾರ್ಮಿಕ

ವರ್ಗದ ಸರ್ವಸಾಮಾನ್ಯ ಆಂದೋಲನ ಮತ್ತು ಸಂಘಟನೆಯ ಮೂಲಕ ಐಕ್ಯತೆಯ ತೀವ್ರಆಕಾಂಕ್ಷೆಯನ್ನು ಜೀವಂತವಾಗಿಟ್ಟರು. ಹನ್ಮೂಲಕ ಕ್ರಾಂತಿಯ ನಂತರ ಎಲ್ಲಾ ರಾಷ್ಟ್ರೀಯ ಗುಂಪುಗಳನ್ನು ಒಗ್ಗಟ್ಟಾಗಿಡುವುದು ಅವರಿಗೆ ಸಾಧ್ಯವಾಯಿತು.

ರಷ್ಯಾದ ವಿಲಕ್ಷಣ ಸನ್ನಿವೇಶ

ಲೆನಿನ್‌ರಷ್ಯಾದಲ್ಲಿರಾಷ್ಟ್ರೀಯ ಗುಂಪುಗಳಿಗೆ ಸ್ವಯಂ ನಿರ್ಧಾರದ ಹಕ್ಕಿನ-ಇದರಲ್ಲಿ ವಿಯೋಜನೆಯ ಅಂದರೆ ಪ್ರತ್ಯೇಕಗೊಳ್ಳುವ ಹಕ್ಕೂ ಸೇರಿದೆ-ಮೇಲೆ ಒತ್ತು ನೀಡಿದ್ದರು. ರೋಜಾ ಲಕ್ಸಂಬರ್ಗ್‌ಜತೆ ಆತ ನಡೆಸಿದ ವಾದವಿವಾದದಲ್ಲಿ ರಷ್ಯಾದಲ್ಲಿ ಸ್ವಯಂ ನಿರ್ಧಾರದ ಹಕ್ಕನ್ನು ಒಂದು ತುರ್ತು ಅವಶ್ಯಕತೆಯನ್ನಾಗಿ ಮಾಡಿದ್ದ ವಿಶೇಷ ಸನ್ನಿವೇಶವನ್ನು ಅವರು ವಿವರಿಸಿದರು." ರಾಷ್ಟ್ರ ಪ್ರಶ್ನೆಗೆ ಸಂಬಂಧ ಪಟ್ಟಂತೆ ರಷ್ಯಾದ ವಿಲಕ್ಷಣ ಸನ್ನಿವೇಶ ಆಸ್ಟ್ರಿಯಾದ್ದಕ್ಕೆ ತದ್ವಿರುದ್ಧವಾದದ್ದು. ರಷ್ಯಾ ಏಕೈಕ ರಾಷ್ಟ್ರೀಯ ಕೇಂದ್ರವುಳ್ಳ ಒಂದು ಪ್ರಭುತ್ವ. ಗ್ರೇಟ್ ರಷ್ಯಾವೇ ಆ ಕೇಂದ್ರ. ಗ್ರೇಟ್ ರಶಿಯನ್ನರು ಒಂದು ವಿಶಾಲ ಅವಿಚ್ಛಿನ್ನ ಪ್ರದೇಶದಲ್ಲಿ ನೆಲೆಯಾಗಿದ್ದು ಅವರ ಸಂಖ್ಯೆ 70 ಮಿಲಿಯವಾಗಿದೆ. ಈ ರಾಷ್ಟ್ರೀಯ ಪ್ರಭುತ್ವದ ವಿಶಿಷ್ಟ ಲಕ್ಷಣಗಳಿವು- ಮೊದಲನೆಯದಾಗಿ, "ಅಡಿಯಾಳು ಜನಸಮೂಹಗಳು"(ಇವರು ಸಂಪೂರ್ಣ ಪ್ರಭುತ್ವವನ್ನು ಒಟ್ಟಾಗಿ ತಗೊಂಡರೆ ಬಹುಸಂಖ್ಯಾತರಾಗುತ್ತಾರೆ. ಅಂದರೆ 57 ಶೇಕಡಾ ಆಗುತ್ತಾರೆ)ಗಡಿ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಎರಡನೆಯದಾಗಿ, ಈ ಅಡಿಯಾಳು ಜನಸಮೂಹಗಳು ಅನುಭವಿಸುವ ದಮನ ಯುರೋಪಿಯನ್ ಪ್ರಭುತ್ವಗಳಲ್ಲಿ ಮಾತ್ರವೇ ಅಲ್ಲ, ನೆರೆಹೊರೆಯ ಎಲ್ಲಾ ಪ್ರಭುತ್ವಗಳಲ್ಲಿ ಇರುವುದಕ್ಕಿಂತಲೂ ಬಹಳಷ್ಟು ಬಲಶಾಲಿಯಾಗಿದೆ. ಮೂರನೆಯದಾಗಿ, ಹಲವು ಸಂದರ್ಭಗಳಲ್ಲಿ ದಮನಕ್ಕೊಳಗಾದ ರಾಷ್ಟ್ರೀಯ ಗುಂಪುಗಳು ತಮ್ಮ ಗಡಿಗಳಾಚೆ ಹೆಚ್ಚು ರಾಷ್ಟ್ರೀಯ ಸ್ವಾತಂತ್ರ್ಯ ಹೊಂದಿರುವ ದೇಶ ಬಾಂಧವರನ್ನು ಹೊಂದಿವೆ..... ನಾಲ್ಕನೆಯದಾಗಿ, ಬಂಡವಾಳಶಾಹಿಯ ಬೆಳವಣಿಗೆ ಮತ್ತು ಸಾಂಸ್ಕೃತಿಕ ಮಟ್ಟ ಕೇಂದ್ರದ ಪ್ರದೇಶಗಳಿಗಿಂತ ಗಡಿ ಕ್ಷೇತ್ರದ ರಶಿಯನೇತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಮೇಲ್ಮಟ್ಟದಲ್ಲಿದೆ. ಕೊನೆಯದಾಗಿ, ಬೂರ್ಜ್ವಾ ಕ್ರಾಂತಿಗಳ ರಾಷ್ಟ್ರೀಯ ಆಂದೋಲನಗಳ ಒಂದು ಘಟ್ಟದ ಆರಂಭ ಕಾಣಬರುತ್ತಿರುವುದು ನೆರೆಯಲ್ಲಿರುವ ಏಷ್ಯನ್ ಪ್ರಭುತ್ವಗಳಲ್ಲಿಯೇ. ಅಲ್ಲಿಂದ ಇದು ರಷ್ಯಾದ ಗಡಿಗಳೊಳಗೆ ಇರುವ ಸೋದರ ರಾಷ್ಟ್ರೀಯ ಗುಂಪುಗಳಲ್ಲಿ ಕೆಲವಕ್ಕೆ ಹರಡುತ್ತಿದೆ.

"ಹೀಗೆ, ರಷ್ಯಾದಲ್ಲಿ ರಾಷ್ಟ್ರ ಪ್ರಶ್ನೆಯ ಈ ವಿಶಿಷ್ಟ ಮೂರ್ತ, ಚಾರಿತ್ರಿಕ ಲಕ್ಷಣಗಳೇ ಸದ್ಯದ ಈ ಅವಧಿಯಲ್ಲಿ ರಾಷ್ಟ್ರಗಳ ಸ್ವಯಂನಿರ್ಧಾರದ ಹಕ್ಕನ್ನು ಮಾನ್ಯ ಮಾಡುವುದನ್ನು ನಮ್ಮ ದೇಶದಲ್ಲಿ ವಿಶೇಷ ತುರ್ತಿನ ವಿಷಯವನ್ನಾಗಿ ಮಾಡಿವೆ" (Collected Works, ಸಂಪುಟ 20, ಪುಟ 407, 408)

ರಷ್ಯಾದಲ್ಲಿ ಸ್ವಯಂ ನಿರ್ಧಾರದ ಹಕ್ಕನ್ನು ಪ್ರತಿಪಾದಿಸುವುದು ರಷ್ಯಾದ ವಿಶಿಷ್ಟ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು. ಆದರೆ ಪ್ರತ್ಯೇಕಗೊಳ್ಳುವುದಕ್ಕೆ ರಾಷ್ಟ್ರಗಳಿಗೆ ಹಕ್ಕು ಇದೆ ಎಂದು ಹೇಳುವುದನ್ನು ಪ್ರತ್ಯೇಕಗೊಳ್ಳುವುದು ಅಪೇಕ್ಷಣೀಯ ಎಂದಂತೆ ಎನ್ನುವುದಾಗಿ ಗೊಂದಲ ಮಾಡಿಕೊಳ್ಳಬಾರದು.

1917ರ ಮೇನಲ್ಲಿ ಸ್ವಯಂ ನಿರ್ಧಾರದ ಹಕ್ಕಿನ ಬಗ್ಗೆ ಒತ್ತಿ ಹೇಳುತ್ತಾ ಲೆನಿನ್ ಈ ಬಗ್ಗೆ ಆಡಿದ ಸ್ಪಷ್ಟ ಮಾತುಗಳಿವು —

ವಿಯೋಜನೆಗೊಳ್ಳುವ ಹಕ್ಕನ್ನು ಒಂದು ನಿರ್ದಿಷ್ಟ ಕ್ಷಣದಲ್ಲಿ ಒಂದು ನಿರ್ದಿಷ್ಟ ರಾಷ್ಟ್ರಕ್ಕೆ ವಿಯೋಜನೆ ಅಪೇಕ್ಷಣೀಯ ಎಂಬ ಗೊಂದಲ ಪಡಿಸಿಕೊಳ್ಳಬೇಕಾಗಿಲ್ಲ. ಈ ಎರಡನೇ ಪ್ರಶ್ನೆಯನ್ನು ಕಾರ್ಮಿಕ ವರ್ಗದ ಪಕ್ಷ ಪ್ರತಿಯೊಂದು ಪ್ರತ್ಯೇಕ ಸಂದರ್ಭದಲ್ಲೂ ಸಮಸ್ತ ಸಾಮಾಜಿಕ ಅಭಿವೃದ್ಧಿಯ ಹಿತಾಸಕ್ತಿಗಳನ್ನು ಮತ್ತು ಸಮಾಜವಾದಕ್ಕಾಗಿ ಕಾರ್ಮಿಕ ವರ್ಗದ ವರ್ಗ ಹೋರಾಟದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸ್ವತಂತ್ರವಾಗಿ ನಿರ್ಧರಿಸಬೇಕು. (Collected Works, ಸಂಪುಟ 24, ಪುಟ 302, 303)

ಸಾರ್ವತ್ರಿಕ ಆಂದೋಲನದ ಭಾಗವಷ್ಟೆ

ಈ ಗ್ರಹಿಕೆಯನ್ನು ಮುಂದಕ್ಕೊಯ್ಯುತ್ತಾ ಸ್ಟಾಲಿನ್ "ರಾಷ್ಟ್ರಗಳ ಹಕ್ಕುಗಳ ಪ್ರಶ್ನೆ, ಸ್ವಯಂ-ಸಂಪೂರ್ಣವಾದ ಬೇರೆಯವಕ್ಕಿಂತ ಸಂಪೂರ್ಣ ಪ್ರತ್ಯೇಕವಾದ ಪ್ರಶ್ನೆಯೇನಲ್ಲ; ಅದು ಕಾರ್ಮಿಕ ವರ್ಗದ ಕ್ರಾಂತಿಯ ಸಾರ್ವತ್ರಿಕ ಸಮಸ್ಯೆಯ ಒಂದು ಭಾಗ, ಪೂರ್ಣಕ್ಕೆ ಒಳಗಾದ ಒಂದು ಭಾಗ. ಮತ್ತು ಅದನ್ನು ಪೂರ್ಣದ ದೃಷ್ಟಿಕೋನದಿಂದಲೇ ಪರಿಶೀಲಿಸಬೇಕು. ಕಳೆದ ಶತಮಾನದ ನಲ್ವತ್ತರ ದಶಕದಲ್ಲಿ ಮಾರ್ಕ್ಸ್ ಪೋಲೆಂಡಿಗರ ಮತ್ತು ಹಂಗೇರಿಯನ್ನರ ರಾಷ್ಟ್ರೀಯ ಆಂದೋಲನಗಳಿಗೆ ಬೆಂಬಲ ನೀಡಿದರು ಮತ್ತು ಜೆಕೊಸ್ಲೋವಾಕಿಯಾದವರು ಮತ್ತು ದಕ್ಷಿಣ ಸ್ಲಾವ್‌ಗಳ ರಾಷ್ಟ್ರೀಯ ಆಂದೋಲನಕ್ಕೆ ಅವರು ವಿರುದ್ಧವಾಗಿದ್ದರು. ಯಾಕೆ ? ಜೆಕೋಸ್ಲಾವಾಕಿಯಾ ಮತ್ತು ದಕ್ಷಿಣ ಸ್ಲಾವ್‌ಗಳು ಆಗ "ಪ್ರತಿಕ್ರಿಯಾವಾದಿ ಜನಸಮೂಹ" ಗಳಾಗಿದ್ದವು; ಯುರೋಪಿನಲ್ಲಿನ "ರಶಿಯನ್ ಹೊರ ಠಾಣೆ"ಗಳಾಗಿದ್ದವು, ನಿರಂಕುಶ ಪ್ರಭುತ್ವದ ಹೊರ ಠಾಣೆಗಳಾಗಿದ್ದವು; ಪೋಲೆಂಡಿನವರು ಮತ್ತು ಹಂಗೇರಿಯವರು ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಡುತ್ತಿದ್ದ "ಕ್ರಾಂತಿಕಾರಿ ಜನಸಮೂಹ" ಗಳಾಗಿದ್ದರು. ಯಾಕೆಂದರೆ ಆಗ ಜೆಕೋಸ್ಲೋವಾಕಿಯಾದ, ಸ್ಲಾವ್‌ನ ಜನರ ರಾಷ್ಟ್ರೀಯ ಆಂದೋಲನಕ್ಕೆ ಬೆಂಬಲ ನೀಡುವುದೆಂದರೆ ಝಾರ್ ಶಾಹಿಗೆ ಪರೋಕ್ಷ ಬೆಂಬಲ ನೀಡಿದಂತಾಗುತ್ತಿತ್ತು. ಈ ಝಾರ್‌ಶಾಹಿ ಯುರೋಪಿನಲ್ಲಿ ಕ್ರಾಂತಿಕಾರೀ ಆಂದೋಲನದ ಅತ್ಯಂತ ಅಪಾಯಕಾರಿ ಶತ್ರುವಾಗಿತ್ತು." ಎಂದು ಬರೆಯುತ್ತಾರೆ.

ಮುಂದುವರಿದು ಸ್ಟಾಲಿನ್ ಲೆನಿನ್ನರ ಈ ಮಾತುಗಳನ್ನು ಉದ್ಧರಿಸುತ್ತಾರೆ— "ಸ್ವಯಂ ನಿರ್ಧಾರವೂ ಸೇರಿದಂತೆ ಪ್ರಜಾಪ್ರಭುತ್ವದ ವಿವಿಧ ಬೇಡಿಕೆಗಳು ಪರಮವೇನೂ ಅಲ್ಲ. ಅವು ಸಾರ್ವತ್ರಿಕ ಪ್ರಜಾಪ್ರಭುತ್ವವಾದಿ (ಈಗ ಸಮಾಜವಾದಿ) ಚಳವಳಿಯ ಒಂದು ಚಿಕ್ಕ ಭಾಗವಾಗಿವೆ. ಬಿಡಿಬಿಡಿಯಾಗಿ ತಗೊಂಡಾಗ ಕೆಲವೊಮ್ಮೆ ಒಂದು ಭಾಗ ಪೂರ್ಣಕ್ಕೆ ವಿರುದ್ಧವಾಗಿ ಕಾಣಬಹುದು. ಹಾಗಿದ್ದರೆ ಅದನ್ನು ತಿರಸ್ಕರಿಸಬೇಕು (Foundation of Leninism NBA, ಪುಟ 80-81)

ಮೊದಲ ಜಾಗತಿಕ ಯುದ್ಧದ ಅಂತ್ಯದವರೆಗೆ ಕಾರ್ಮಿಕ ಆಂದೋಲನದಲ್ಲಿ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಪ್ರಶ್ನೆಯ ಬಗ್ಗೆ ಚರ್ಚೆ ಬಹುಪಾಲು ಬಂಡವಾಳಶಾಹಿ ಯುರೋಪಿಗಷ್ಟೆ, ಯುರೋಪಿನ ವಿಭಜಿತ ಮತ್ತು ದಮನಕ್ಕೊಳಗಾದ ರಾಷ್ಟ್ರಗಳಿಗಷ್ಟೆ ಸೀಮಿತವಾಗಿತ್ತು. ಜಾಗತಿಕ ಯುದ್ಧನಂತರದ ವಿಮೋಚನಾ ಆಂದೋಲನಗಳು ವಸಾಹತುಗಳನ್ನು ಕುರಿತ-ತೆ ತಳೆಯಬೇಕಾದ ನಿಲುವಿನ ಪ್ರಶ್ನೆ ಮುಂದೆ ಬಂತು. ಎರಡನೇ ಅಂತರ್‌ರಾಷ್ಟ್ರೀಯ ಮೊದಲ ಜಾಗತಿಕ ಯುದ್ಧದ ಮೊದಲು ಇದನ್ನು ಚರ್ಚಿಸಿದ್ದರೂ ಅದು ಒಂದು ಸಮಯ ಸಾಧಕ ನಿಲುವನ್ನು ಅಂಗೀಕರಿಸಿತ್ತು. ಪ್ರಥಮ ಜಾಗತಿಕ ಯುದ್ಧವನ್ನು ವಸಾಹತುಗಳಿಗಾಗಿ ಯುದ್ಧ ಎಂದು ಖಂಡಿಸಿದ್ದ ಲೆನಿನ್ ಮತ್ತು ಬೊಲ್ಶೆವಿಕ್ ಪಕ್ಷ ವಸಾಹತುಗಳ ಸಂಪೂರ್ಣ ಸ್ವಾಧೀನತೆಯ ಬೇಡಿಕೆಯನ್ನು ಪೂರ್ಣವಾಗಿ ಬೆಂಬಲಿಸಿದರು. ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯಕ್ಕೆ ಸಂಬದ್ಧಗೊಂಡ ಎಲ್ಲಾ ಕಮ್ಯೂನಿಸ್ಟ್ ಪಕ್ಷಗಳು ವಸಾಹತುಗಳ ವಿಮೋಚನೆಗೆ ಬೆಂಬಲ ನೀಡಿದವು. ಗುಲಾಮಗಿರಿಗೊಳಗಾದ ದೇಶಗಳಲ್ಲಿ ಸ್ವಾಧೀನತೆಗಾಗಿ ನಡೆಯುವ ಹೋರಾಟ ಜಾಗತಿಕ ಕಾರ್ಮಿಕ ವರ್ಗಕ್ಕೆ ಬಂಡವಾಳಶಾಹಿಯನ್ನು ಕಿತ್ತೆಸೆಯುವಲ್ಲಿ ನೆರವಾಗುವ ಒಂದು ಮಹಾನ್ ಕ್ರಾಂತಿಕಾರಿ ಶಕ್ತಿಯೆಂದು ಅವು ತಿಳಿದವು. ರಾಷ್ಟ್ರೀಯ ಆಂದೋಲನಗಳು ಮತ್ತು ಅವುಗಳ ಯಶಸ್ಸು ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಬುಡಮೇಲು ಮಾಡಿ ತನ್ಮೂಲಕ ಮೆಟ್ರೋಪಾಲಿಟನ್ ದೇಶಗಳಲ್ಲಿ ಕಾರ್ಮಿಕ ವರ್ಗದ ಹೋರಾಟವನ್ನು ಸುಲಭಗೊಳಿಸುತ್ತದೆ ಎಂಬ ಅರಿವು ಅವರಿಗಾಗಿತ್ತು.

> **ಮಾರ್ಕ್ಸ್‌ವಾದ** ರಾಷ್ಟ್ರೀಯತೆಯ ಸಮಸ್ಯೆಯ ಪರಿಹಾರವನ್ನು ಅಮೂರ್ತವಾದ ರೀತಿಯಲ್ಲಿ ಪರಿಶೀಲಿಸುವುದಿಲ್ಲ. ಸಾಮಾಜಿಕ ಬೆಳವಣಿಗೆಯ ಸದ್ಯದ ಘಟ್ಟದ, ವರ್ಗ ಹೋರಾಟದ ಸಂದರ್ಭದಲ್ಲಿ ಪರಿಶೀಲಿಸುತ್ತದೆ,ಮತ್ತು ಈ ಸಮಸ್ಯೆಗೆ ನೀಡುವ ಮಹತ್ವ ಸಾರ್ವತ್ರಿಕ ಸಾಮಾಜಿಕ ಹೋರಾಟದಲ್ಲಿ, ನಮ್ಮ ಕಾಲದ ವರ್ಗ ಹೋರಾಟದಲ್ಲಿ ಅದು ವಹಿಸುವ ಪಾತ್ರದ ಅನುಪಾತದಲ್ಲಿರುತ್ತದೆ.

ವಿಮೋಚನಾ ಆಂದೋಲನಕ್ಕೆ ಬೆಂಬಲ

ಇಲ್ಲಿ ಕೂಡಾ, ಸಮಾಜವಾದೀ ಕ್ರಾಂತಿಗಳು ಆದಾಗಲೇ ಕಾರ್ಯಕ್ರಮ ಪಟ್ಟಿಯಲ್ಲಿ ಬಂದಿತ್ತು ಒಂದು ಕಾಲಘಟ್ಟದಲ್ಲಿ ಸಾಮಾಜಿಕ ಬೆಳವಣಿಗೆಯನ್ನು ಮುಂದಕ್ಕೊಯ್ಯುವಲ್ಲಿ ರಾಷ್ಟ್ರೀಯ ವಿಮೋಚನಾ ಆಂದೋಲನ ವಹಿಸಿದ ಪಾತ್ರವನ್ನು ಆಧರಿಸಿಯೇ ಮಾರ್ಕ್ಸ್‌ವಾದಿಗಳು ಅದನ್ನು ಬೆಂಬಲಿಸಿದರು.

ಸ್ಟಾಲಿನರುಗಮನಿಸಿದ ಅಂಶಗಳಿವು- "ಈ ಮೊದಲು ರಾಷ್ಟ್ರ ಪ್ರಶ್ನೆಯನ್ನು ಒಂದು ಸುಧಾರಣಾವಾದೀ ದೃಷ್ಟಿಕೋನದಿಂದಲೇ ನೋಡಲಾಗುತ್ತಿತ್ತು, ಅಂದರೆ ಬಂಡವಾಳದ ಶಕ್ತಿಯ, ಸಾಮ್ರಾಜ್ಯಶಾಹಿಯನ್ನು ಕಿತ್ತೆಸೆಯುವುದು, ಕಾರ್ಮಿಕ ವರ್ಗದ ಕ್ರಾಂತಿಯ ಸಾರ್ವತ್ರಿಕ ಪ್ರಶ್ನೆಯೊಂದಿಗೆ ಏನೇನು ಸಂಬಂಧವಿಲ್ಲದ ಸ್ವತಂತ್ರ ಪ್ರಶ್ನೆಯೆಂದು ಬಗೆಯಲಾಗುತ್ತಿತ್ತು. ವಸಾಹತುಗಳಲ್ಲಿನ ವಿಮೋಚನಾ ಆಂದೋಲನದೊಂದಿಗೆ ನೇರ ಮಹತ್ವವಿಲ್ಲದೇನೇ ಯುರೋಪಿನಲ್ಲಿ ಕಾರ್ಮಿಕ ವರ್ಗ ವಿಜಯ ಸಾಧಿಸಲು ಸಾಧ್ಯವಿದೆ. ರಾಷ್ಟ್ರ-ವಸಾಹತು ಪ್ರಶ್ನೆಯನ್ನು ತಣ್ಣಗೆ "ತನ್ನ ಅನುಕೂಲಕ್ಕೆ ತಕ್ಕಂತೆ", ಕಾರ್ಮಿಕ ಕ್ರಾಂತಿಯ ಹೆದ್ದಾರಿಯಿಂದ ಬಹುದೂರದಲ್ಲಿ, ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಕ್ರಾಂತಿಕಾರಿ ಹೋರಾಟವಿಲ್ಲದೇ ಪರಿಹರಿಸಬಹುದು ಎಂದು ಸೂಚ್ಯವಾಗಿ ಭಾವಿಸಲಾಗಿತ್ತು. ಈಗ ಈ ಕ್ರಾಂತಿಕಾರಿ-ವಿರೋಧೀ ದೃಷ್ಟಿಕೋನ ಬಯಲಿಗೆ ಬಂದಿದೆ ಎಂದು ನಾವು ಹೇಳಬಹುದಾಗಿದೆ. ರಾಷ್ಟ್ರ ಪ್ರಶ್ನೆಯನ್ನು ಕಾರ್ಮಿಕ ಕ್ರಾಂತಿಯೊಂದಿಗೆ ಮತ್ತು ಅದರ ಆಧಾರದ ಮೇಲಷ್ಟೇ ಪರಿಹರಿಸಲು ಸಾಧ್ಯ. ಪಶ್ಚಿಮದಲ್ಲಿ ಕ್ರಾಂತಿಯ ವಿಜಯದ ಹಾದಿ ವಸಾಹತುಗಳ ಮತ್ತು ಅಧೀನ ದೇಶಗಳ ವಿಮೋಚನಾ ಆಂದೋಲನಗಳೊಂದಿಗೆ ಸಾಮ್ರಾಜ್ಯಶಾಹೀ ವಿರುದ್ಧ ಮಿತ್ರತ್ವದ ಕ್ರಾಂತಿಕಾರಿ ಮೂಲಕ ಹಾದು ಹೋಗುತ್ತದೆ ಎಂಬುದನ್ನು ಲೆನಿನ್‌ವಾದ ಸಿದ್ಧಪಡಿಸಿದೆ ಮತ್ತು ಸಾಮ್ರಾಜ್ಯಶಾಹೀ ಯುದ್ಧ ಹಾಗೂ ರಷ್ಯಾದ ಕ್ರಾಂತಿ ಅದನ್ನು ತೋರಿಸಿಕೊಟ್ಟಿದೆ. ರಾಷ್ಟ್ರ ಪ್ರಶ್ನೆ ಕಾರ್ಮಿಕ ವರ್ಗದ ಕ್ರಾಂತಿಯ ಸಾರ್ವತ್ರಿಕ ಸಮಸ್ಯೆಯ ಒಂದು ಭಾಗ. ಕಾರ್ಮಿಕ ವರ್ಗದ ಸರ್ವಾಧಿಕಾರದ ಪ್ರಶ್ನೆಯ ಒಂದು ಭಾಗ.

"ಪ್ರಶ್ನೆ ಹೀಗಿದೆ- ದಮನಕ್ಕೊಳಗಾದ ದೇಶಗಳ ಕ್ರಾಂತಿಕಾರೀ ವಿಮೋಚನಾ ಆಂದೋಲನದಲ್ಲಿ ಅಂತರ್ಗತವಾಗಿರುವ ಕ್ರಾಂತಿಕಾರೀ ಸಾಧ್ಯತೆಗಳು ಆದಾಗಲೇ ಖಾಲಿಯಾಗಿ ಬಿಟ್ಟಿವೆಯೇ? ಇಲ್ಲವಾದರೆ, ಈ ಸಾಮರ್ಥ್ಯಗಳನ್ನು ಕಾರ್ಮಿಕ ವರ್ಗದ ಕ್ರಾಂತಿಗಾಗಿ, ಸಾಮ್ರಾಜ್ಯಶಾಹೀ ಬೂರ್ಜ್ವಾ ವರ್ಗದ ಒಂದು ಮೀಸಲು ಶಕ್ತಿಯನ್ನು ಕ್ರಾಂತಿಕಾರೀ ಕಾರ್ಮಿಕ ವರ್ಗದ ಮೀಸಲು ಶಕ್ತಿಯನ್ನಾಗಿ ಪರಿವರ್ತಿಸುವ, ಕಾರ್ಮಿಕ ವರ್ಗದ ಮಿತ್ರನಾಗಿ ಪರಿವರ್ತಿಸುವ, ಏನಾದರೂ ಆಸೆ, ಆಧಾರ ಇದೆಯೇ ? ಲೆನಿನ್‌ವಾದ ಈ ಪ್ರಶ್ನೆಗೆ "ಇದೆ" ಎಂದು ಉತ್ತರಿಸುತ್ತದೆ. [Foundations of Leninism, ಪುಟ 79]

ಪ್ರಶ್ನೆ - ನಮ್ಮ ದೇಶದಲ್ಲಿ

ಇಲ್ಲಿ ಎರಡು ಅಂಶಗಳನ್ನು ಮತ್ತೆ ಒತ್ತಿ ಹೇಳಲಾಗಿದೆ. ವಿಮೋಚನಾ ಆಂದೋಲನಗಳ ಪಾತ್ರವನ್ನು ಅವು ಕಾರ್ಮಿಕ ವರ್ಗದ ಕ್ರಾಂತಿಗೆ ಜಗತಿನ ಸಾಮಾಜಿಕ ಬದಲಾವಣೆಯಲ್ಲಿ-ವಹಿಸುವ ಪಾತ್ರದ ಸಂದರ್ಭದಲ್ಲಿ ಪರೀಕ್ಷಿಸಲಾಗುತ್ತದೆ. ಎರಡನೆಯದಾಗಿ. ರಾಷ್ಟ್ರೀಯ ವಿಮೋಚನಾ ಪ್ರಶ್ನೆಯನ್ನು ಪರಿಹರಿಸಲು ಮೆಟ್ರೋಪಾಲಿಟನ್ ದೇಶಗಳ [ದಮನ ನಡೆಸುತ್ತಿರುವ ದೇಶಗಳ-ಅನು] ಮತ್ತು ದಮನಕ್ಕೊಳಗಾದ ದೇಶಗಳ ಕಾರ್ಮಿಕ ವರ್ಗದ ಐಕ್ಯತೆ ಅಗತ್ಯ ಎಂಬುದನ್ನು ಇನ್ನೊಮ್ಮೆ ಒತ್ತಿ ಹೇಳಲಾಗಿದೆ.

ಇದು ರಾಷ್ಟ್ರ ಸಮಸ್ಯೆಯ ಬಗ್ಗೆ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಕಣ್ಣೋಟ. ಭಾರತದಲ್ಲಿಇಂದು ರಾಷ್ಟ್ರೀಯತೆಯ ಸಮಸ್ಯೆಯ ಸರಿಯಾದ ಸ್ವಭಾವವೇನು ? ಈ ಸಮಸ್ಯೆಯ ಪರಿಹಾರ ಹೇಗೆ ಭಾರತದಲ್ಲಿ ಸಾಮಾಜಿಕ ಪ್ರಗತಿ ಮತ್ತು ಅಭಿವೃದ್ಧಿಗೆ ನೆರವಾಗುತ್ತದೆ ? ಅದು ಸಮಾಜವಾದೀ ಕ್ರಾಂತಿಗೆ ದಾರಿ ಮಾಡಿಕೊಡುವ ಜನತಾ ಪ್ರಜಾ-ಪ್ರಭುತ್ವವಾದೀ ಕ್ರಾಂತಿಯ ಒಂದು ಭಾಗವೇ ಅಥವಾ ಕ್ರಾಂತಿಗೆ ಅಡ್ಡಿ ಮಾಡುವ ಒಂದು ಅಂಶವೇ ? ಮತ್ತು ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಕಾರ್ಮಿಕ ವರ್ಗ, ಎಲ್ಲಾ ರಾಷ್ಟ್ರೀಯತೆಗಳ ಕಾರ್ಮಿಕ ವರ್ಗ ಎಂತಹ ಪಾತ್ರವಹಿಸಬೇಕಾಗಿದೆ ?

(ಮುಂದುವರಿಯುವುದು)

ಸಿಂಧನೂರು ತಾಲೂಕಿನಲ್ಲಿ ಯಶಸ್ವಿ ಕಾಲ್ನಡೆ ಜಾಥಾ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನಲ್ಲಿ ಕರ್ನಾಟಕ ಪ್ರಾಂತ ರೈತಸಂಘವು ಹಳ್ಳಿಯಿಂದಳ್ಳಿಗೆ ರೈತರ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ದಿನಾಂಕ: 7-8-84 ರಂದು ದೇವರಗುಡಿ ಗ್ರಾಮದಲ್ಲಿ ನ್ಯಾಯವಾದಿ ಹನುಮಂತಪ್ಪ ಗುಡಿ ಜಾಥಾ ಉದ್ಘಾಟನೆಯನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಪ್ರಭುಗೌಡ, ತಾಲೂಕ್ ಜನತಾ ಪಕ್ಷದ ಉಪಾಧ್ಯಕ್ಷರು ಆಗಮಿಸಿದ್ದರು. ಜಾಥಾದಲ್ಲಿ ಗುಂಡಾ ಮತ್ತು ತುರ್ವಿಹಾಳ ಹೋಬಳಿಯ 41 ಗ್ರಾಮಗಳನ್ನು 15-8-84 ರವರೆಗೆ ಸಂಪರ್ಕಿಸಿ ಗ್ರಾಮೀಣ ಪ್ರದೇಶದ ರಾಜಕೀಯ, ಆರ್ಥಿಕ, ಸಾಮಾಜಿಕ, ಅಂಶಗಳ ಸಮೀಕ್ಷೆ ನಡೆಸಿ ಮುಖ್ಯ ಸಮಸ್ಯೆಗಳ ಪಟ್ಟಿಯನ್ನು ಮಾಡಿದರು, ಬಿ. ಲಿಂಗಪ್ಪ, ಕೆ. ಬಸವರಾಜ, ಶಂಕರಪ್ಪ ಗದ್ರಟಗಿ, ಜಿ. ವೆಂಕನಗೌಡ ಇತರ 57 ಜನ ಭಾಗವಹಿಸಿದ್ದರು. 25 ಗ್ರಾಮಗಳಲ್ಲಿ ರೈತರ ಬಹಿರಂಗ ಸಭೆ ನಡೆಸಲಾಯಿತು.

ದಿನಾಂಕ: 15-8-84 ರಂದು ಪುರಸಭೆ ಮೈದಾನದಲ್ಲಿ ಮುಕ್ತಾಯ ಸಮಾರಂಭವನ್ನೇರ್ಪಡಿಸಲಾಗಿತ್ತು. ಅದಕ್ಕೆ ಮುಂಚೆ ನೂರಾರು ಕೆಂಬಾವುಟ ಹಿಡಿದ ರೈತರ-ಕೃಷಿ ಕಾರ್ಮಿಕರು, ಮಹಿಳೆಯರನ್ನೊಳಗೊಂಡ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

4 ಸಾವಿರ ರೈತರು, ನಾಗರೀಕರು ಸೇರಿದ್ದ ಬಹಿರಂಗ ಸಭೆಯನ್ನು ಸಂಘದ ಕೋಶಾಧಿಕಾರಿ ಶಂಕ್ರಪ್ಪ ಸ್ವಾಗತಿಸಿದರು. ಎಂ. ಈರಪ್ಪ ಉಪಾಧ್ಯಕ್ಷರು ಸಮಸ್ಯೆಗಳ ಪಟ್ಟಿಯನ್ನು ಓದಿದರು. ಮುಖ್ಯ ಅತಿಥಿಗಳಾದ ಜಿಲ್ಲಾ ಉಪಾಧ್ಯಕ್ಷ ಕಂಟೆಪ್ಪನವರು ಸಮಸ್ಯೆಗಳ ಪರಿಹಾರಕ್ಕೆ ರೈತರು ಒಗ್ಗೂಡಬೇಕೆಂದು ಕರೆ ನೀಡಿದರು. ಅಲ್ಲದೆ ಸ್ಥಳೀಯ ಶಾಸಕರು, ಕಾಡಾ ಸಮಿತಿ ಚೇರಮನ್‌ರಾದ ಎಂ. ಮಲ್ಲಪ್ಪನವರು ರೈತರ ಕಾಲ್ನಡೆ ಜಾಥಾ ಕಾರ್ಯಕ್ರಮವನ್ನು ಸ್ವಾಗತಿಸಿ ರೈತರ ಏಳಿಗೆಗಾಗಿ ನೂರು ಅಂಶಗಳ ಮಾಹಿತಿಯನ್ನು ವಿವರಿಸಿ ರೈತರ ಬೇಡಿಕೆಗಳಿಗಾಗಿ ಒಳಗೂ ಹೊರಗೂ ಹೋರಾಡುತ್ತೇವೆ ಎಂದು ಹೇಳಿದರು. ಸಭೆಯನ್ನುದ್ದೇಶಿಸಿ ಕಾ. ಬಿ. ಲಿಂಗಪ್ಪ, ವೆಂಕನಗೌಡ, ಚಂದ್ರಶೇಖರ ಬಾಳೆ, ಮಾತನಾಡಿದರು. ಕಾ. ಬಸವರಾಜಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕೆ. ಬಸವರಾಜ ಧನ್ಯವಾದ ಅರ್ಪಿಸಿದರು.

ಬೆಂಗಳೂರು

ಎಸ್.ಎಫ್.ಐ. ಗೆ ಗೆಲುವು

23-8-84 ರಂದು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ನಡೆದ ವಾರ್ಷಿಕ ಚುನಾವಣೆಯಲ್ಲಿ ಎಸ್. ಎಫ್. ಐ. ಬೆಂಗಳೂರು ನಗರ ಸಮಿತಿ ಸದಸ್ಯರು ಮತ್ತು ಬೆಂಗಳೂರು ಸರ್ಕಾರಿ ವಿಜ್ಞಾನ ಕಾಲೇಜಿನ ಎಸ್.ಎಫ್.ಐ. ಘಟಕದ ಉಪಾಧ್ಯಕ್ಷರೂ ಆಗಿರುವ ಕಾ|| ಬಿ. ಎಸ್. ಗುರುಮೂರ್ತಿಯವರು ಲಲಿತ ಕಲಾ ಕಾರ್ಯದರ್ಶಿಯಾಗಿ 8 ಜನ ಪ್ರತಿಸ್ಪರ್ಧಿಗಳ ಜೊತೆ ಸ್ಪರ್ಧಿಸಿ ಭಾರೀ ಬಹುಮತದಿಂದ ಜಯಗಳಿಸಿದ್ದಾರೆ. ಹಾಗೂ ಮತ್ತೊಬ್ಬ ನಗರ ಸಮಿತಿ ಸದಸ್ಯ ಹಾಗೂ ಸ.ವಿ.ಕಾ. ದ ಎಸ್. ಎಫ್.ಐ. ಘಟಕದ ಅಧ್ಯಕ್ಷರಾದ ಕಾ|| ಎನ್. ನಾಗರಾಜುರವರು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ ಕೆಲವೇ ಮತಗಳ ಅಂತರದಲ್ಲಿ ಸೋತರೂ ಕೂಡಾ ಪ್ರತಿಸ್ಪರ್ಧಿಗಳಿಗೆ ತೀವ್ರ ಪೈಪೋಟಿ ಕೊಟ್ಟಿದ್ದಾರೆ. ಈ ಇಬ್ಬರು ಸಂಗಾತಿಗಳೂ ಎಸ್.ಎಫ್.ಐ ಹೆಸರಿನಲ್ಲೇ ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ನಮ್ಮ ಸಂಗಾತಿಗಳಿಗೆ ದೊರಕಿರುವ ಜಯ ನಮ್ಮ ಸಂಘಟನೆಗೆ ದೊರಕಿರುವ ಜನಪ್ರಿಯತೆ ಹಾಗೂ ಪ್ರಜಾಪ್ರಭುತ್ವಕ್ಕೆ ಜಯವಾಗಿರುತ್ತದೆ, ಈ ಚುನಾವಣೆಯಲ್ಲಿ ನಮ್ಮ ಸಂಗಾತಿಗಳ ಜಯಕ್ಕಾಗಿ ಶ್ರಮವಹಿಸಿ ದುಡಿದಂತಹ ಎಲ್ಲಾ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ. ಸಂಗಾತಿಗಳಿಗೆ ಬೆಂಗಳೂರು ನಗರ ಸಮಿತಿ ಕೃತಜ್ಞತೆಗಳನ್ನು ಅರ್ಪಿಸುತ್ತದೆ ಎಂಬುದಾಗಿ ಬೆಂಗಳೂರು ನಗರ ಸಮಿತಿಯ ಕಾರ್ಯದರ್ಶಿ ಶ್ರೀಧರಮೂರ್ತಿ ತಿಳಿಸಿದ್ದಾರೆ.

ಸಂತಾಪ ಸೂಚನೆ

ರಾಮಚಂದ್ರ ನಾವದ ಅವರ ತಾಯಿ ಇಂದಿರಮ್ಮನವರು ಆಗಸ್ಟ್ 20ರಂದು ಹೊಸಪೇಟೆಯಲ್ಲಿ ನಿಧನರಾದುದಕ್ಕೆ ಡಿ. ವೈ. ಎಫ್. ಐ. ರಾಜ್ಯ ಸಮಿತಿ ತನ್ನ ಸಂತಾಪ ವ್ಯಕ್ತ ಮಾಡಿದೆ. ತಮ್ಮ ವಾಸದ ಮನೆಯನ್ನು ಯುವಜನ ಸಂಘಟನೆಗೆ ಬಿಟ್ಟುಕೊಟ್ಟು ಅದರ ಚಟುವಟಿಕೆಗಳನ್ನು ಮೌನವಾಗಿಯೇ ನೋಡಿ ಸಹಕರಿಸುತ್ತಿದ್ದ ಇಂದಿರಮ್ಮನವರನ್ನು ಡಿ.ವೈ.ಎಫ್. ಐ. ಎಂದೆಂದಿಗೂ ನೆನಪಿಟ್ಟುಕೊಳ್ಳುತ್ತದೆ. ಮೃತರ ಕುಟುಂಬದ ದುಃಖದಲ್ಲಿ ಅದೂ ಭಾಗಿಯಾಗಿದೆ.

ಎನ್. ಟಿ. ಆರ್. ಸರಕಾರ ವಜಾ
ಸಿ. ಐ.ಟಿ. ಯು ಖಂಡನೆ

ಆಂಧ್ರ ಪ್ರದೇಶದ ರಾಜ್ಯಪಾಲ ರಾಮಲಾಲರು ಸಂವಿಧಾನಕ್ಕೆ ವಿರೋಧವಾಗಿ ಎನ್. ಟಿ. ರಾಮರಾವ್ ಮಂತ್ರಿಮಂಡಳವನ್ನು ವಜಾ ಮಾಡಿ ಪಕ್ಷಾಂತರಿ ಭಾಸ್ಕರರಾವರನ್ನು ಗದ್ದುಗೆಗೆ ಏರಿಸಿದ್ದಾರೆ. ಜಮ್ಮು ಕಾಶ್ಮೀರದಲ್ಲಿ ಫರೂಕ್ ಅಬ್ದುಲ್ಲಾರವರ ಸರ್ಕಾರವನ್ನು ಉರುಳಿಸಿದ ನಂತರ ನಮ್ಮ ದೇಶದಲ್ಲಿ ಪ್ರಜಾಸತ್ತೆಗೆ ಇದು ಇನ್ನೊಂದು ಪ್ರಬಲ ಪ್ರಹಾರವಾಗಿದೆ ಎಂಬುದಾಗಿ ರಾಜ್ಯ ಸಿ.ಐ.ಟಿ. ಯು. ಪ್ರಧಾನ ಕಾರ್ಯದರ್ಶಿ ಕಾ. ಸಿ. ನಂಜುಂಡಪ್ಪ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬರುವ "ಭಾರತ್ ಬಂದ್"ಗೆ ಸಿಐಟಿಯು ಸಂಘಗಳು ಮತ್ತು ಸದಸ್ಯರು ಉತ್ಸಾಹದಿಂದ ಕ್ರಿಯಾಶೀಲವಾಗಿ ಭಾಗವಹಿಸಬೇಕೆಂದೂ ಪ್ರಜಾಪ್ರಭುತ್ವಕ್ಕಾಗಿ, ಸರ್ವಾಧಿಕಾರ ಮತ್ತು ಅಧಿಕಾರ ಶಾಹಿಗಳ ವಿರುದ್ಧ ನಡೆಯುವ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕೆಂದು ಸಿ.ಐ.ಟಿ.ಯು ಕರೆ ಕೊಡುತ್ತದೆ.

*

ಸ್ಪಿನ್ನಿಂಗ್ ಮಿಲ್ಸ್ ಕಾರ್ಮಿಕರ ಹೋರಾಟ

ರಾಯಚೂರಿನಿಂದ 7 ಕಿ. ಮಿ ದೂರದಲ್ಲಿರುವ ಕೋ ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್‌ನಲ್ಲಿ ಸುಮಾರು 500 ಜನ ಕಾರ್ಮಿಕರು ದುಡಿಯುತ್ತಿದ್ದು, ಹತ್ತಾರು ವರ್ಷಗಳಿಂದಲೂ ಉದ್ಯೋಗದ ಖಾಯಂ ಇಲ್ಲದೆ, ಅತೀ ಕಡಿಮೆ ವೇತನದಲ್ಲಿ ದುಡಿಯುತ್ತಿದ್ದು ಅನೇಕ ಕಾರ್ಮಿಕ ಕಾನೂನುಗಳಿಂದ ವಂಚಿತರಾಗಿ ಅತೀವ ಶೋಷಣೆಗೆ ಒಳಗಾಗಿದ್ದಾರೆ.

ತಮ್ಮೆಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಐ. ಎನ್. ಟಿ. ಯು. ಸಿ. ನೇತೃತ್ವದಲ್ಲಿದ್ದ ಸಂಘಟನೆಯನ್ನು ತೊರೆದು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗಿ, ಮ್ಯಾನೇಜ್‌ಮೆಂಟ್‌ನ ಜೊತೆ ಹಲವಾರು ಮನವಿಗಳನ್ನರ್ಪಿಸಿ, ಶಾಂತಿಯುತವಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಚರ್ಚಿಸಿದರೂ ಮ್ಯಾನೇಜ್‌ಮೆಂಟ್‌ನ ಕಾರ್ಮಿಕ ವಿರೋಧಿ ನೀತಿಯಿಂದಾಗಿ ಯಾವುದೇ ಒಪ್ಪಂದ ಸಾಧ್ಯವಾಗಲಿಲ್ಲ.

3-8-84 ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ ಕಾರ್ಮಿಕರು ಹೋರಾಟವನ್ನು ಮುಂದುವರಿಸುತ್ತಿದ್ದಾರೆ. ಆಡಳಿತ ವರ್ಗ ಕಾರ್ಮಿಕರನ್ನು ಖಾಯಂ ಬದಲಿ, ಟೆಂಪರ್‌ವರಿ, ಅಪ್ರೆಂಟೀಸ್ ಎಂಬ ಹೆಸರಿನಲ್ಲಿ ವಿಭಾಗಿಸಿ, ಅತೀ ಕಡಿಮೆ ಕೂಲಿ ಕೊಡುವುದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಸರಾಸರಿ ಉತ್ಪಾದನೆ ಕೊಡುವ ಅಪ್ರೆಂಟೀಸರನ್ನು ಮೂರು ವರ್ಷಗಳಾದರೂ ಖಾಯಂ ಮಾಡದೆ ಕೇವಲ 5 ರೂ ಕೂಲಿಯಲ್ಲಿ ದುಡಿಸುತ್ತಿದ್ದಾರೆ.

ಆಗಸ್ಟ್ 3,6,10ನೇ ತಾರೀಕಿನಂದು ಮ್ಯಾನೇಜ್‌ಮೆಂಟ್‌ನ ಜೊತೆ ಮಾತುಕತೆಯಲ್ಲಿ ಸಿ. ಐ. ಟಿ. ಯು. ನಗರ ಸಮಿತಿಯ ಕಲಾಲಬಂಡಿ ಪುರುಷೋತ್ತಮ ಮತ್ತು ತಾಯಣ್ಣ ಯಾಗೀರಾ ಇವರು ಭಾಗವಹಿಸಿದ್ದರು.

★

ಸುಳ್ಯ ತಾಲೂಕಿನಲ್ಲಿ ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸುವ ಚಳುವಳಿ

ಜನತೆಯೊಂದಿಗೆ ಸಂಪರ್ಕ ಮತ್ತು ಅವರಿಗೆ ರಾಜಕೀಯ ತಿಳುವಳಿಕೆಯನ್ನಿತ್ತು ಸಂಘಟಿಸುವುದರಲ್ಲಿ ಕ್ರಾಂತ್ರಿಕಾರಿ ಪತ್ರಿಕೆಯದ್ದು ಬಹಳ ಮುಖ್ಯ ಪಾತ್ರವಿದೆ. ಪ್ರಚಾರ, ಹೋರಾಟ, ಸಂಘಟನೆ ಮತ್ತು ಮುಖಂಡತ್ವವನ್ನು ರೂಪಿಸುವುದರಲ್ಲಿ ಲೆನಿನ್ ಅವರು ಹೇಳಿರುವಂತೆ ಕ್ರಾಂತಿಕಾರಿ ಪಕ್ಷದ ಪತ್ರಿಕೆಯದ್ದು ಮುಖ್ಯ ಪಾತ್ರವಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹಳ್ಳಿಯ ಬಡವರ ಹಾಗೂ ಇತರೆ ಜನತೆಯ ಮಧ್ಯೆ ಸಂಬಂಧ ಹಾಗೂ ಸಂಘಟನೆಯನ್ನು ಬಲಪಡಿಸುವುದಕ್ಕಾಗಿ ಗ್ರಾಮ ಗ್ರಾಮದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆಯಾದ ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸಲು ದ. ಕ. ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ನಿರ್ಧರಿಸಲಾಯಿತು. ಕಾಮ್ರೇಡ್ ಎಂ. ಕೆ. ಭಟ್ ಅವರ ಮುತುವರ್ಜಿ ಮತ್ತು ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದ ಮೂಲಕ ಈಗಾಗಲೇ ತಾಲೂಕಿನಲ್ಲಿ ಸುಮಾರು ನೂರ ಐವತ್ತು ಮಂದಿ ಚಂದಾದಾರರನ್ನು ಸೇರಿಸಲಾಗಿದೆ. ಶೀಘ್ರನೇ ತಾಲೂಕಿನಲ್ಲಿ ಒಟ್ಟು ಚಂದದಾರರ ಸಂಖ್ಯೆಯನ್ನು ಇನ್ನೂರಕ್ಕೇರಿಸುವುದಾಗಿ ಕಾ. ಎಂ. ಕೆ. ಯವರು ಹೇಳಿದ್ದಾರೆ. ನೆರೆಯ ತಾಲೂಕುಗಳಲ್ಲೂ ಜಿಲ್ಲೆಯಾದ್ಯಂತವೂ ಈ ರೀತಿಯ ಪ್ರಯತ್ನವನ್ನು ಸ್ವಲ್ಪ ಮಟ್ಟಿಗಾದರೂ ಮಾಡಲಾಗುವುದು.

ಉಡುಪಿ

ಎಸ್. ಎಫ್. ಐ. ಸಭೆ

ಉಡುಪಿ ಲಾ ಕಾಲೇಜಿನ ಎಸ್. ಎಫ್. ಐ. ಘಟಕದ ಸರ್ವಸದಸ್ಯರ ಸಭೆಯು 19-8-84 ರಂದು ಕಡಿಯಾಳಿಯಲ್ಲಿ ಜರುಗಿತು.

ಸುಮಾರು 40 ಮಂದಿ ಸದಸ್ಯರು ಸಭೆಯಲ್ಲಿ ಹಾಜರಿದ್ದು ವಿದ್ಯಾರ್ಥಿ ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸಿದರು. ಬಳಿಕ ಯು.ಜಿ.ಸಿ. ಸಮಿತಿಯ ಶಿಫಾರಸಿನ ವಿರುದ್ಧ, ಆಂಧ್ರ ಪ್ರದೇಶದಲ್ಲಿ ಎನ್ ಟಿ.ಆರ್. ಮಂತ್ರಿ ಮಂಡಲವನ್ನು ವಜಾ ಮಾಡಿದ ಅಲ್ಲಿನ ರಾಜ್ಯಪಾಲರ ಪ್ರಜಾಸತ್ತಾತ್ಮಕ ವಿರೋಧಿ ಕ್ರಮದ ವಿರುದ್ಧ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅಧ್ಯಕ್ಷತೆ ವಹಿಸಿದ್ದ ಕಾ|| ವಿಶ್ವನಾಥ ರೈಯವರು ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಮಾತನಾಡಿ. ಎನ್. ಟಿ. ಆರ್. ಮಂತ್ರಿ ಮಂಡಲವನ್ನು ವಜಾ ಮಾಡಿದುದರ ವಿರುದ್ಧ ಲಾ ಕಾಲೇಜಿನ ಎಸ್. ಎಫ್. ಐ. ಸದಸ್ಯರು ದಿನಾಂಕ 16-8-84 ರಂದು ನಡೆಸಿದ ಮತಪ್ರದರ್ಶನವನ್ನು ಶ್ಲಾಘಿಸಿದರು. ಎಸ್. ಎಫ್.ಐ. ಸಂಘಟನೆಯು ಬಲಶಾಲಿಯಾಗಿ ಬೆಳೆದು ಬರಲೆಂದು ಹಾರೈಸಿದರು.

ಆರಂಭದಲ್ಲಿ ಕಾ|ಕೆ.ಪಿ. ಮೋಹನ್ ಕುಮಾರ್ ಸ್ವಾಗತಿಸಿದರು. ಕೊನೆಗೆ ಕಾ| ಎಸ್. ಆರ್. ವಿಜಯಶಂಕರ್ ವಂದಿಸಿದರು.

ಡಿ.ವೈ.ಎಫ್.ಐ. ಘಟಕದ ರಚನೆ

3-8-84 ರಂದು ಸಿಂದನೂರಿನಲ್ಲಿ ಡಿವೈಎಫ್ಐ ಘಟಕವನ್ನು ರಚಿಸಲಾಯಿತು. ಮುಖ್ಯ ಭಾಷಣಕಾರರಾಗಿ ಕಾ|| ನಾರಾಯಣ ಕಿಲ್ಲೇದ ಮತ್ತು ಕಾ|| ನರಸಿಂಹಪ್ಪ ಅವರು ಸಂಘಟನೆಯ ಧ್ಯೇಯೋದ್ದೇಶಗಳ ಬಗ್ಗೆ ಮಾತನಾಡಿದ ನಂತರ ನಗರ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾ|| ನರಸಿಂಹಪ್ಪ, ಸಹ ಸಂಚಾಲಕರಾಗಿ ಜಿಲಾನಿ ಪಾಶಾ, ಖಜಾಂಚಿಯಾಗಿ ಗೋಪಾಲಕೃಷ್ಣ, ಸದಸ್ಯರುಗಳಾಗಿ ಕೃಷ್ಣ, ಮೆಹಬೂಬ್, ಈಸುಫ್ ವಿರೂಪಾಕ್ಷಯ್ಯ, ನಾರಾಯಣ್ ಕೆ, ಅಯ್ಯಪ್ಪ ಬುದಿವಾಳ್, ನನ್ನೀಬೇಗಂ, ಬಿ. ಹುಸೇನ್, ಗಂಗಮ್ಮ, ಶ್ಯಾಮಣ್ಣ, ಸುಭಾನ್, ಮತ್ತು ಸೈದಪ್ಪ ಇವರುಗಳನ್ನು ಸಭೆಯಲ್ಲಿ ಹಾಜರಿದ್ದ ಸುಮಾರು 75 ಯುವಜನರು ಆಯ್ಕೆ ಮಾಡಿದರು. ನಂತರ ನನ್ನಿಬೇಗಂ ಅವರು ವಂದನಾರ್ಪಣೆ ಮಾಡಿದರು.

○

ಕೋಟೆಕಾರ್ ಗ್ರಾಮದ ರೈತರ ಸಭೆ

ತಾ—17-8-84 ರಂದು ಕೋಟೆಕಾರು ಗ್ರಾಮದ ರೈತರ ಸಭೆಯು ಶ್ರೀ ಉಗ್ಗಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರಂಭದಲ್ಲಿ ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ರಾಮಚಂದ್ರ ಉಚ್ಚಿಲ್‌ರವರು ಸಭೆ ಕರೆದ ಉದ್ಧೇಶವನ್ನು ವಿವರಿಸಿದರು. ಬಳಿಕ ರೈತ ಸಂಘಟನೆಯನ್ನು ಬಲಗೊಳಿಸುವ ಅವಶ್ಯಕತೆಯನ್ನು ಕುರಿತು ಕೋಟೆಕಾರು ಸರ್ಕಲ್ ರೈತ ಸಂಘದ ಅಧ್ಯಕ್ಷರಾದ ಶ್ರೀ ಯು. ಪಿ. ಡಿಸೋಜರು ಮಾತನಾಡಿದರು. ಬಳಿಕ ಕೆ. ಉಗ್ಗಪ್ಪ ಶೆಟ್ಟರು ಅಧ್ಯಕ್ಷರಾಗಿಯೂ ಎನ್. ಕೃಷ್ಣ ಶೆಟ್ಟರು ಕಾರ್ಯದರ್ಶಿಯಾಗಿಯೂ ಕೆ. ಕೃಷ್ಣಪ್ಪ ಉಪಾಧ್ಯಕ್ಷರಾಗಿಯೂ, ಜಯಂತ ರೈ ಜೊತೆ ಕಾರ್ಯದರ್ಶಿಯಾಗಿಯೂ ಇರುವ ಸಮಿತಿಯೊಂದನ್ನು ರಚಿಸಲಾಯಿತು. ಕೋಟೆಕಾರ್ ಉಚ್ಚಿಲ ತೋಡಿನಲ್ಲಿ ಉಸುಕು ತುಂಬಿರುವುದರಿಂದ ನೂರಾರು ರೈತರ ಕೃಷಿ ಭೂಮಿಗೆ ಈಗಾಗಲೇ ಹಡಿಲು ಬಿದ್ದಿರುತ್ತದೆ. ಇದಕ್ಕೆ ಸರಕಾರ ಗಂಭೀರವಾಗಿ ಕ್ರಮ ಕೈಗೊಳ್ಳದಿದ್ದರೆ ರೈತ ಸಂಘವು ಹೋರಾಟಕ್ಕೆ ಧುಮುಕುವಂತ ಸಂದರ್ಭ ಬರಬಹುದು ಸಂಬಂಧ ಪಟ್ಟ ಅಧಿಕಾರಿಗಳು ಇದನ್ನು ಗಮನಿಸಿ ರೈತರಿಗೆ ಕೃಷಿ ಮಾಡಲು ಸಹಕರಿಸಬೇಕೆಂದೂ ಸರಕಾರವನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು ಸರಕಾರಿ ಭೂಮಿಯಲ್ಲಿ ಮನೆ ಕಟ್ಟಿ ವಾಸಮಾಡುತ್ತಿರುವವರಿಗೆ ಹಕ್ಕು ಪತ್ರವನ್ನು ಸರಕಾರ ಕೊಡಲು ಕ್ರಮ ಕೈಗೊಳ್ಳಬೇಕೆಂದು ಹಾಗೂ ರೈತರ ಸ್ವಾಧೀನವಿರುವ ಸ್ಥಳವನ್ನು ಕೂಡಲೇ ರೈತರಿಗೆ ಕಾಯಂಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಲು ತೀರ್ಮಾನ ಕೈಕೊಳ್ಳಲಾಯಿತು. ★

ತಲಪಾಡಿ ಗ್ರಾಮ ರೈತರ ಸಭೆ

ತಾ—15-7-84 ರಂದು ತಲಪಾಡಿ ಗ್ರಾಮ ರೈತರ ಸಭೆಯು ಶ್ರೀ ಪದ್ಮನಾಭ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ತಾಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ರಾಮಚಂದ್ರ ಉಚ್ಚಿಲ್‌ವರು ಸಭೆಕರೆದ ಉದ್ದೇಶವನ್ನು ವಿವರಿಸಿ ರೈತ ಸಂಘವನ್ನು ಬಲಪಡಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ತಾಲೂಕು ರೈತ ಸಂಘದ ಉಪಾಧ್ಯಕ್ಷ ಜೆ. ಕೃಷ್ಣಪ್ಪನವರು ಸಂಘಟನೆಯ ಮಹತ್ವವನ್ನು ವಿವರಿಸಿದರು. ಬಳಿಕ ಮುಂದಿನ ಚಟುವಟಿಕೆ ನಡೆಸಲು ಶ್ರೀ ಪದ್ಮನಾಭ ಶೆಟ್ಟಿ (ಅಧ್ಯಕ್ಷ), ಶ್ರೀ ಚಂದ್ರಹಾಸ ಶೆಟ್ಟಿ (ಉಪಾಧ್ಯಕ್ಷ), ಪೂವಪ್ಪ ಶೆಟ್ಟಿ [ಕಾರ್ಯದರ್ಶಿ] ಡಿಸೋಜ [ಜತೆ ಕಾರ್ಯದರ್ಶಿ] ಒಳಗೊಂಡ ಸಮಿತಿಯನ್ನು ರಚಿಸಲಾಯಿತು.

ತಲಪಾಡಿ ತೋಡಿನಲ್ಲಿ ಹ್ಯೊಗೆ [ಉಸುಕು] ತುಂಬಿ ಹಲವಾರು ರೈತರಿಗೆ ತೊಂದರೆಯಾಗಿದ್ದು ಇದನ್ನು ಸರ್ಕಾರವು ಕೂಡಲೇ ತೆಗೆದು ರೈತರಿಗೆ ಕೃಷಿ ಮಾಡಲು ಅನುಕೂಲವಾಗುವಂತೆ ಸಹಕರಿಸಬೇಕು ಹಾಗೂ ತೋಡಿನ ತೆಂಕು ಬದಿಗೆ ಕಲ್ಲು ಕಟ್ಟಿಸಲು ಕ್ರಮ ಕೈಕೊಳ್ಳಬೇಕೆಂದು ವಿನಂತಿಸಲಾಯಿತು.

ತಲಪಾಡಿಯಲ್ಲಿ ನ್ಯಾಯ ಬೆಲೆಯ ಅಂಗಡಿಯಿಲ್ಲದೆ ಜನರು ಮೈಲು ಗಟ್ಟಲೆ ನಡೆದು ರೇಶನು ಸಾಮಾಗ್ರಿ ತರಲು ಹೋಗುವಂತಾಗಿದೆ. ಇದನ್ನು ಸರ್ಕಾರವು ಗಮನಿಸಿ ಕೂಡಲೇ ನ್ಯಾಯ ಬೆಲೆಯ ಅಂಗಡಿಯನ್ನು ತೆರೆಯುವಂತೆ ಒತ್ತಾಯಿಸಲಾಯಿತು. ○

ಮಕ್ಕಳ ಸ್ಕಾಲರ್‌ಶಿಪ್ ಸ್ವಾಹಾ - ತನಿಖೆಗೆ ಒತ್ತಾಯ

ಮಂಗಳೂರು ತಾಲೂಕು, ಕುಪ್ಪೆಪದವು ತಿಲೆಂಚಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 1982—83 ನೇ ಸಾಲಿನ ಬೀಡಿ ಸ್ಕಾಲರ್ ಶಿಪ್ 36 ವಿದ್ಯಾರ್ಥಿಗಳಿಗೆ 4950 ರೂ ಬಂದಿತ್ತು.

ಅದರಲ್ಲಿ 36 ವಿದ್ಯಾರ್ಥಿಗಳಿಗೆ 2.400 ನ್ನು ಮುಖ್ಯೋಪಾಧ್ಯಾಯರು ಹಂಚಿ, ಉಳಿದ ಹಣವನ್ನು ತನ್ನ ಸ್ವಂತ ಖರ್ಚಿಗಾಗಿ ಉಪಯೋಗಿಸಿರುತ್ತಾರೆ ಎಂದು ತಿಳಿದು ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ವಿದ್ಯಾರ್ಥಿಗಳ ರಕ್ಷಕರ ಬೆಂಬಲದಿಂದ ದ. ಕ. ಜಿಲ್ಲಾ ಬೀಡಿ ಫೆಡರೇಶನ್ ಮುಖಾಂತರ ತನಿಖೆ ನಡೆಸಲು ಬೆಂಗಳೂರಿನಲ್ಲಿರುವ ಕಾರ್ಮಿಕ ಕಲ್ಯಾಣ ಇಲಾಖೆಗೆ ಮತ್ತು ಅದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಲಾಗಿತ್ತು.

ಆ ಪ್ರಕಾರ 27-7-84 ರಂದು ಬೆಂಗಳೂರಿನ ಕಾರ್ಮಿಕ ಇಲಾಖೆಯ ಲೇಬರ್ ಕಮಿಷನರ್ ಮತ್ತು ಪ್ರಕಾಶ್ ಬೀಡಿ ಮಾಲಿಕರು ಶಾಲೆಗೆ ಬಂದು ತನಿಖೆ ಮಾಡಿದ್ದಾರೆ ತನಿಖೆಯಲ್ಲಿ ಮುಖ್ಯೋಪಾಧ್ಯಾಯರ ವಂಚನೆಯು ತಿಳಿದು ಬಂದಿತು. ಮುಖ್ಯೋಪಾಧ್ಯಾಯರು ವಂಚನೆ ಮಾಡಿದ ಹಣವನ್ನು 10-8--84 ರೊಳಗೆ ಕೊಡುತ್ತೇನೆಂದು ಒಪ್ಪಿಕೊಂಡರು.

ಆ ಪ್ರಕಾರ 36 ಮಕ್ಕಳಿಗೆ ಉಳಿದ ಹಣವನ್ನು ತಾ 14--8-84 ರಂದು ಪಾವತಿ ಮಾಡಿರುತ್ತಾರೆ.

ಇನ್ನು ಮುಂದೆ ಮಂಜೂರಾದ ಬೀಡಿ ಸ್ಕಾಲರ್ ಶಿಪ್‌ನ ವಿವರವನ್ನು ಕಾರ್ಮಿಕ ಕಲ್ಯಾಣ ಇಲಾಖೆಯವರು ಮಂಜೂರಾದ ವಿದ್ಯಾರ್ಥಿಗಳಿಗೆಲ್ಲಾ ತಿಳಿಸಬೇಕೆಂದು ಕುಪ್ಪೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ವಾಸುದೇವ ಆಚಾರ್ಯ ತಿಳಿಸಿರುತ್ತಾರೆ.

ವಿದ್ಯಾರ್ಥಿ - ಯುವಜನರ ಚಟುವಟಿಕೆಗಳು

ಕುಂದಾಪುರ

ಡಿ. ವೈ. ಎಫ್. ಐ ರಾಜ್ಯ ಸಮಿತಿಯ ಸಭೆಯು ಕುಂದಾಪುರದಲ್ಲಿ 1984 ಆಗಸ್ಟ್ 11-12 ರಂದು ನಡೆಯಿತು. ಅಖಿಲ ಭಾರತ ಉಪಾಧ್ಯಕ್ಷ ಕಾಂ. ಇ. ಪಿ. ಜಯರಾಜನ್ ಅವರು ಹಾಜರಿದ್ದರು. ಸಭೆಗೆ ಪೂರ್ವ ಭಾವಿಯಾಗಿ ಡಿ. ವೈ. ಎಫ್. ಐ ದ. ಕ ಜಿಲ್ಲಾ ಸಮಿತಿಯವರು ಸರ್ವ ಸದಸ್ಯರ ಸಭೆ ಹಾಗೂ ಕುಂದಾಪುರದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು.

ಮಂಗಳೂರು

9-8-84ರ ಸಂಜೆ ಮಂಗಳೂರಿನಲ್ಲಿ ಹಾಗೂ ಪಕ್ಕೇಡ್ಯಗಳಲ್ಲಿ ಎರಡು ಸರ್ವ ಸದಸ್ಯರ ಸಭೆಗಳು ನಡೆದುವು. ಸಭೆಯ ಅಧ್ಯಕ್ಷತೆಯನ್ನು ಪುರ ಸಭಾ ಸದಸ್ಯ ಕಾ. ಸದಾಶಿವಶೆಟ್ಟಿ ಮತ್ತು ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿ ಕಾ. ಬಿ. ಮಾಧವ ಅವರುಗಳು ವಹಿಸಿದ್ದರು. ಸಭೆಗಳನ್ನುದ್ದೇಶಿಸಿ ಮಾತನಾಡಿದ ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಮ್ ಅವರು ಸಾಮೂಹಿಕ ಸಂಘಟನೆಗಳಿಗೆ ಸಾಮೂಹಿಕ ಸದಸ್ಯತ್ವ ಅಗತ್ಯವೆಂದು ಹೇಳಿ 84ರ ಸದಸ್ಯತ್ವವನ್ನು ತ್ವರಿತ ಮಾಡಬೇಕೆಂದು ಹೇಳಿದರು. ಕಾ. ಇ. ಪಿ. ಜಯರಾಜನ್ ಅವರು ಡಿ.ವೈ.ಎಫ್.ಐ.ನ ಬೆಳವಣಿಗೆ, ಅವರ ಇತ್ತೀಚಿನ ಚೈನಾ ಪ್ರವಾಸದ ಬಗ್ಗೆ ಮಾತನಾಡುತ್ತ ಸಮಾಜವಾದಿ ಚೀನಾದ ಎಲ್ಲಾ ರಂಗಗಳಲ್ಲಿನ ಪ್ರಗತಿ, ನಿರುದ್ಯೋಗ, ಅನಕ್ಷರತೆ, ಮತ್ತು ಆರ್ಥಿಕ ಅಸಮಾನತೆಯನ್ನು ನಿರ್ಮೂಲನ ಮಾಡಿರುವ ಆ ರಾಷ್ಟ್ರದಲ್ಲಿ ಒಬ್ಬ ನಿರುದ್ಯೋಗಿ, ಅನಕ್ಷರಸ್ಥ, ಬಡವ, ಇಲ್ಲದಿರುವ ಬಗ್ಗೆ ಹೇಳಿದರು. ಮಂಗಳೂರು ತಾಲ್ಲೂಕ್ ಸಂಚಾಲಕ ಕಾ. ಶಿವಾನಂದ ಕೋಡಿ ವಂದಿಸಿದರು.

12-8-84ರ ಸಂಜೆ ಕುಂದಾಪುರದಲ್ಲಿ ಬಹಿರಂಗ ಸಭೆಗೆ ಮುನ್ನ ತಾಲ್ಲೂಕ್ ಅಧ್ಯಕ್ಷ ಕಾ. ವೆಂಕಟೇಶ್ ಕೋಣಿ ಅವರ ನೇತೃತ್ವದಲ್ಲಿ ಜಯರಾಜನ್ ಅವರನ್ನು ಸ್ವಾಗತಿಸಲಾಯಿತು. ಡಿ. ವೈ. ಎಫ್. ಐ. ಕಲಾವಿದರಿಂದ ರಾಷ್ಟ್ರೀಯ ಸಮಗ್ರತೆ, ಶಾಂತಿ, ವರದಕ್ಷಿಣೆ ನಿರುದ್ಯೋಗದ ಪೋಸ್ಟರ್ಸ್ ಪ್ರದರ್ಶನ ನಡೆಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ. ಮಹಾಬಲ ವಡೇರ ಹೋಬ್ಳಿ ವಹಿಸಿದ್ದರು. ಕಾ. ಇ. ಪಿ ಜಯರಾಜನ್, ರಾಜ್ಯ ಕಾರ್ಯದರ್ಶಿ ಎಸ. ಶಿವರಾಂ. ಉಪಾಧ್ಯಕ್ಷ ಕೆ. ವಿ. ಸತ್ಯನಾರಾಯಣ್ ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿ ಬಿ. ಮಾಧವ ಅವರುಗಳು ಮಾತನಾಡಿದರು ತಾಲ್ಲೂಕ್ ಕಾರ್ಯದರ್ಶಿ ಶಂಕರ್ ಕಾವಿ ಅವರು ವಂದನಾರ್ಪಣೆ ಮಾಡಿದರು. ಡಿ.ವೈ. ಎಫ್ ಐ. ಕಾರ್ಯಕರ್ತರಾದ ಮಂಜುನಾಥ್ ಬಸೂರ್ ಮತ್ತು ನಾರಾಯಣ ಭಟ್ ಅವರುಗಳು ಹತ್ತಾರು ಭಂಗಿಗಳಲ್ಲಿ ಯೋಗಾಸನ ಪ್ರದರ್ಶನ ನೀಡಿ ಸಾರ್ವಜನಿಕರನ್ನು ರಂಜಿಸಿದರು.

ಧಾರವಾಡ

ಆಗಸ್ಟ್ 15 ರಂದು ಹತ್ತಿಕೊಳ್ಳದಲ್ಲಿ [ಅಶೋಕ ನಗರ] ಡಿ. ವೈ. ಎಫ್. ಐ. ಘಟಕವನ್ನು ಸಿ.ಐ.ಟಿ.ಯು. ಕಾರ್ಯಕರ್ತರಾದ ಎಸ್. ಆರ್. ಪರಪ್ಪನವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಸದಸ್ಯ ಕೆ ಬಿ. ಕಟ್ಟಿಯವರು ವಹಿಸಿದ್ದರು. ಸಭೆಯಲ್ಲಿ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಹಾಸಿಮ ಧಾರವಾಡ ಅಧ್ಯಕ್ಷ, ವಿಶ್ವನಾಥ ಬದಿ ಕಾರ್ಯದರ್ಶಿ, ಅಮೀರ ಖಾನ್ ಪಠಾಣ ಉಪಾಧ್ಯಕ್ಷ ಅಜಮ್ಮ ರಾಜಣ್ಣನವರ ಹಾಗೂ ಮುನ್ನಿಲ ಮಹಮದ ಕೋಳೂರು ಸಹ ಕಾರ್ಯದರ್ಶಿ ಅಲ್ಲದೆ ಆರು ಜನ ಸಮಿತಿ ಸದಸ್ಯರು ಆಯ್ಕೆಯಾದರು.

ಕುಂದಾಪುರ

ಕುಂದಾಪುರದಲ್ಲಿ ತಾ. 18-8-84 ರಂದು ನಡೆದ ಎಸ್. ಎಫ್. ಐ. ಸರ್ವ ಸದಸ್ಯರ ಸಭೆಯಲ್ಲಿ ಈ ಕೆಳಗಿನ ನಗರ ಸಮಿತಿಯನ್ನು ರಚಿಸಲಾಯಿತು. ರವಿಶಂಕರ್ (ಅಧ್ಯಕ್ಷ), ಕೆ. ಎಂ. ಶಫಿ, ಕೆ. ವಿ. ನಾಗರಾಜ್-ಉಪಾಧ್ಯಕ್ಷರು, ಅಶೋಕ್ ಕೆ. ನಾಯಕ್-ಕಾರ್ಯದರ್ಶಿ-ರಮಾನಾಥ. ಕೆ. ಕೆ. ಸುಗುಣ-ಸಹ ಕಾರ್ಯದರ್ಶಿಗಳು. ಇತರ 15 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು.

ಸಭೆಯಲ್ಲಿ ಭಂಡಾರ್ಕಾರ್ಸ್ ಮತ್ತು ಶಾರದ ಕಾಲೇಜ್, ಕುಂದಾಪುರ ಮತ್ತು ಕೋಟೇಶ್ವರದ ಸರಕಾರಿ ಕಿರಿಯ ಕಾಲೇಜ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್.ಎಫ್.ಐ. ದ. ಕ. ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ ಸಭೆಯಲ್ಲಿದ್ದು ಮಾರ್ಗದರ್ಶನ ನೀಡಿದರು.

ಕುಂದಾಪುರದ ಸರಕಾರಿ ಕಿರಿಯ ಕಾಲೇಜ್ ಎಸ್. ಎಫ್. ಐ. ಸಮಿತಿಗೆ ಈ ಕೆಳಗಿನವರು ಆಯ್ಕೆಯಾಗಿದಾರೆ. ಚೆನ್ನಪ್ಪ ಪೂಜಾರಿ—ಅಧ್ಯಕ್ಷ, ವಸಂತಾ — ಉಪಾಧ್ಯಕ್ಷೆ, ಕೃಷ್ಣ ಜಿ. ಎಂ-ಕಾರ್ಯದರ್ಶಿ, ಕೆ. ವಿವೇಕ, ವಿ. ರಾಜು-ಸಹಕಾರ್ಯದರ್ಶಿಗಳು, ಕೆ. ವಿ. ನಾಗರಾಜ್-ಕ್ರೀಡಾ ಕಾರ್ಯದರ್ಶಿ.

ಮಂಗಳೂರು

ಭಾರತ ವಿದ್ಯಾರ್ಥಿ ಫೆಡರೇಶನ್ ಮಂಗಳೂರು ಜಿಲ್ಲೆಯ ಸರಕಾರಿ ಶಾಲಾ ಕಾಲೇಜುಗಳಲ್ಲಿ ಕೊರತೆ ಇರುವ ಅಧ್ಯಾಪಕರ ಸ್ಥಾನವನ್ನು ಭರ್ತಿ ಮಾಡಲು ಒತ್ತಾಯಿಸಿ ಕಳೆದ ಆ. 12 ರಿಂದ ಜಿಲ್ಲಾಧಿಕಾರಿ ಕಛೇರಿ ಎದುರು ನಡೆಸುತ್ತಿರುವ ಸರದಿ ನಿರಶನ ಸತ್ಯಾಗ್ರಹವನ್ನು ನಿಲುಗಡೆ ಮಾಡಲಾಗಿದೆ. ತಾ॥ 18.8 84 ರಂದು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಉಳ್ಳಾಲದ ಶಾಸಕರಾದ ಪಿ. ರಾಮಚಂದ್ರರಾವ್ ರವರ ಸಮ್ಮುಖದಲ್ಲಿ ನಡೆದ ಮಾತುಕತೆಯಲ್ಲಿ ಜಿಲ್ಲಾಧಿಕಾರಿಯವರು ಜಿಲ್ಲೆಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಧ್ಯಾಪಕರನ್ನು ನೇಮಿಸುವಂತೆ ಬೆಂಗಳೂರಿನ ಕಾಲೇಜು ಶಿಕ್ಷಣ ನಿರ್ದೇಶಕರಿಂದ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಪತ್ರ ಬಂದಿರುವ ವಿಷಯವನ್ನು ತಿಳಿಸಿದರು. ಇನ್ನು ಕೆಲವೇ ದಿನಗಳಲ್ಲಿ ಅಧ್ಯಾಪಕರ ನೇಮಕಾತಿ ಮಾಡುವ ಭರವಸೆ ನೀಡಿದರು. ಶಿಕ್ಷಣ ಇಲಾಖೆಯ ಉಪನಿರ್ದೇಶಕರನ್ನು ಭೇಟಿ ಮಾಡಿದಾಗ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಕಂಟ್ರಾಕ್ಟ್ ಪದ್ಧತಿಯಲ್ಲಿ ಸೆಪ್ಟೆಂಬರ್ 15 ರ ಒಳಗೆ ಕೊರತೆ ಇರುವ ಶಿಕ್ಷಕರನ್ನು ನೇಮಿಸುವುದಾಗಿ ತಿಳಿಸಿದರು. ಈ ಕಾರಣಗಳಿಂದಾಗಿ ತಾ. 19-8-84 ರಂದು ಮಂಗಳೂರಿನಲ್ಲಿ ಜರುಗಿದ ಎಸ್. ಎಫ್.ಐ. ದ. ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸಭೆಯಲ್ಲಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಈ ಹೋರಾಟದ ವಿಜಯಕ್ಕಾಗಿ ಸಹಕರಿಸಿದ ವಿದ್ಯಾರ್ಥಿಗಳಿಗೆ ಎಸ್.ಎಫ್.ಐ. ಅಭಿನಂದನೆಗಳನ್ನು ಸಲ್ಲಿಸಿದೆ.

ಕೊನೆಯ ದಿನ 18-8-84 ರಂದು ಕಾರ್ಕಳ ತಾಲೂಕಿನ ಸಾಣೂರು ಪ್ರೌಢ ಶಾಲೆಯ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು ಈ ಶಾಲೆಯಲ್ಲಿ ಕಳೆದ ಒಂದು ವರ್ಷದಿಂದ ಗಣಿತ ಮತ್ತು ಹಿಂದಿ ವಿಷಯಕ್ಕೆ ಸಂಬಂಧಪಟ್ಟ ಅಧ್ಯಾಪಕರು ಇಲ್ಲದೆ ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದಾರೆ. ಇಂದಿನ ಶಿಕ್ಷಣ ಪದ್ಧತಿಯಲ್ಲಿರುವ ಅವ್ಯವಸ್ಥೆಯೇ ಇದಕ್ಕೆ ಕಾರಣ.

ಬಳ್ಳಾರಿ ಜಿಲ್ಲೆ

ಜುಲೈ 20 ರಂದು ಹರಪನಹಳ್ಳಿ ಸರ್ಕಾರಿ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಸಭೆ ಸೇರಿ ವಿದ್ಯಾರ್ಥಿ ಫೆಡರೇಷನ್ ಸಮಿತಿ ರಚಿಸಿಕೊಂಡರು ಪಿ. ಆರ್. ವೆಂಕಟೇಶ ಅವರು ಎಸ್. ಎಫ್. ಐ. ಯ ಧ್ಯೇಯ ಧೋರಣೆಗಳನ್ನು ವಿವರಿಸಿದರು.

ಆರ್. ಸಫಿಯುಲ್ಲಾರವರನ್ನು ಸಂಚಾಲಕರನ್ನಾಗಿಯೂ, ಬಿ. ಅಲ್ಲಾಬಕ್ಷ, ಎ. ವಿರೂಪಾಕ್ಷಿ, ರಮೇಶ್ ಅವರನ್ನು ಸಹಸಂಚಾಲಕರನ್ನಾಗಿಯೂ ಚುನಾಯಿಸಲಾಯಿತು. ●

ಉಕ್ಕಿಹರಿದ ಪ್ರತಿಭಟನೆಯ ಮಹಾಪೂರ

(1ನೆ ಪುಟದಿಂದ)

ಗೌರಿ ಬಿದನೂರು, ಶಿಡ್ಲಘಟ್ಟ, ರಾಯಚೂರು, ಹೊಸಪೇಟೆ, ದೊಡ್ಡಬಳ್ಳಾಪುರ, ಶಿವಮೊಗ್ಗ, ತೀರ್ಥಹಳ್ಳಿ ಗುಲ್ಬರ್ಗ, ಮಂಗಳೂರು, ಕುಂದಾಪುರ ದಕ್ಷಿಣ ಕನ್ನಡದ ಇನ್ನಿತರ ತಾಲ್ಲೂಕು ಕೇಂದ್ರಗಳಲ್ಲಿ, ಬಂದ್‌ಗಳು ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಿವೆ. ಪ್ರತಿಯೊಂದು ಊರಿನಲ್ಲಿಯೂ ಜನರು ಸ್ವ ಇಚ್ಛೆಯಿಂದ ಎಂದೂ ಮೆರವಣಿಗೆಗಳಲ್ಲಿ ಭಾಗವಹಿಸದ, ಸಂಘಟನೆಗಳಿಗೆ ಹೊರತಾದ ಜನ ಬಹು ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ.

ಬೆಂಗಳೂರಿನಲ್ಲಿ ಪ್ರತಿಭಟನೆಯ ಮುಂದಿನ ಕ್ರಮವಾಗಿ ಸಿ.ಐ.ಟಿ.ಯು.ವಿನ ಸೂಚನೆಯಂತೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು [ಇಂಟಕ್ ಹೊರತಾಗಿ] ಆಗಸ್ಟ್ 25 ರಂದು ಬೆಂಗಳೂರಿನಲ್ಲಿ ಸಾರ್ವತ್ರಿಕ ಮುಷ್ಕರವನ್ನು ಆಚರಿಸಲು ತೀರ್ಮಾನಿಸಿದವು. ಅದೇ ವೇಳೆಗೆ ಅಖಿಲ ಭಾರತ ಮಟ್ಟದಲ್ಲಿ ಎಲ್ಲಾ ಕಾಂಗ್ರೆಯೇತರ ವಿರೋಧ ಪಕ್ಷಗಳ ಸಭೆಯ ತೀರ್ಮಾನದಂತೆ ಅದೇ ದಿನ ದೇಶಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ದಿನವನ್ನು ಆಚರಿಸಲು ಕರೆ ನೀಡಲಾಯಿತು.

ಪ್ರತಿಭಟನಾ ದಿನವನ್ನು ಆಚರಿಸಲು ನೀಡಿದ ಈ ಕರೆ ಜನರ ಸ್ವಯಂ ಪ್ರೋತ್ಸಾಹದಿಂದ ಕರ್ನಾಟಕ ಬಂದ್ ಆಗಿ ಪರಿವರ್ತಿತಗೊಂಡಿತು. ಬೆಂಗಳೂರಿನಲ್ಲಿ ಮಾತ್ರ ಮೊದಲ ಬಾರಿಗೆ ತಮ್ಮ ಯಾವುದೇ ಪ್ರಶ್ನೆಗಳಿಗಲ್ಲದೆ ಕೇವಲ ರಾಜಕೀಯ ಪ್ರಶ್ನೆಗಾಗಿ ಮಾತ್ರವೇ ನಡೆದ ಪ್ರಥಮ ಸಾರ್ವತ್ರಿಕ ಮುಷ್ಕರ ಅತ್ಯಂತ ಯಶಸ್ವಿಯಾಯಿತು. ಅಂದು ಸಾರ್ವಜನಿಕ ವಲಯದ ಹೆಚ್.ಎ.ಎಲ್, ಹೆಚ್. ಎಂ. ಟಿ, ಐ.ಟಿ.ಐ, ಬಿ.ಇ.ಎಲ್, ಬಿ.ಇ.ಎಂ.ಎಲ್, ಬಿ. ಹೆಚ್. ಇ. ಎಲ್, ಕಾರ್ಖಾನೆಗಳು ಮತ್ತು ಖಾಸಗೀ ವಲಯದ ದೊಡ್ಡ ಸಣ್ಣ ಕಾರ್ಖಾನೆಗಳು ಮುಚ್ಚಿದ್ದವು ಯಾವುದೇ ಸಾರಿಗೆ ಸೌಲಭ್ಯಗಳಿಲ್ಲದಿದ್ದರೂ ಕಾಲ್ನಡಿಗೆಯಲ್ಲಿಯೇ ಸುಮಾರು 10 ಸಾವಿರ ಜನ ಮೈಸೂರು ಬ್ಯಾಂಕ್ ಚೌಕದಿಂದ ರಾಜಭವನದವರೆಗೂ ಮೆರವಣಿಗೆ ನಡೆಸಿದರು ನಂತರ ರಾಜ್ಯಪಾಲರಿಗೆ ಸಿ.ಐ.ಟಿ.ಯು. ಎ.ಐ.ಟಿ.ಯು.ಸಿ. ಎಚ್.ಎಂ.ಎಸ್. ಬಿ.ಎಂ.ಎಸ್. ಎಚ್. ಎಮ್. ಕೆ. ಪಿ. ಗೆ ಸೇರಿದ ಪ್ರತಿನಿಧಿಗಳು ಮನವಿ ಪತ್ರವನ್ನು ಸಲ್ಲಿಸಿದರು. ಸಿ.ಐ.ಟಿ.ಯು.ವಿನ ಪರವಾಗಿ ಕಾ ಎಸ್. ಸೂರ್ಯನಾರಾಯಣ ರಾವ್ ಮತ್ತು ಕಾ. ಪಿ. ರಾಮಚಂದ್ರರಾವ್ ನಿಯೋಗದಲ್ಲಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಕಾ. ಸೂರ್ಯನಾರಾಯಣ ರಾವ್ ಅವರು ತುರ್ತು ಪರಿಸ್ಥಿತಿ ನಮ್ಮ ದೇಶದಲ್ಲಿ ಜಾರಿಗೆ ಬಂದಾಗ ಅದರ ವಿರುದ್ಧ ಪ್ರತಿಭಟಿಸುವುದರಲ್ಲಿ ಕಾರ್ಮಿಕ ವರ್ಗ ತನ್ನ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ. ಈಗ ಕಾರ್ಮಿಕ ವರ್ಗ ಎಚ್ಚೆತ್ತುಕೊಂಡಿದೆ. ಪ್ರಜಾಪ್ರಭುತ್ವವನ್ನು ಉಳಿಸುವ ತನ್ನ ಆದ್ಯ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಕಂಕಣ ಬದ್ಧವಾಗಿದೆ. ಜನಗಳ ಪ್ರತಿಭಟನೆಗೆ ಹೆದರಿ ಕೈಗೊಂಬೆ ರಾಜ್ಯಪಾಲ ರಾಮಲಾಲ್ ರಾಜೀನಾಮೆ ನೀಡಿದ್ದಾರೆ ಆದರೆ ರಾಮಲಾಲರ ಮೇಲೆ ಗೂಬೆ ಕೂಡಿಸಿದ ಮಾತ್ರಕ್ಕೆ ನಾವು ತೃಪ್ತರಾಗುವುದಿಲ್ಲ. ಭಾಸ್ಕರ ರಾವ್ ನ ಪಕ್ಷಾಂತರಿ ಗ್ಯಾಂಗ್ ಸರ್ಕಾರವನ್ನು ತಕ್ಷಣವೇ ಕಿತ್ತೊಗೆದು ಎನ್.ಟಿ ಆರ್. ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಬೇಕು ಕರ್ನಾಟಕ ಸರ್ಕಾರವನ್ನು ಉರುಳಿಸುವ ಯಾವುದೇ ಪ್ರಯತ್ನಕ್ಕೆ ಕಾರ್ಮಿಕರು ಈ ಸಾರ್ವತ್ರಿಕ ಮುಷ್ಕರದ ಮೂಲಕ ತಮ್ಮ ಪ್ರತಿಭಟನೆಯನ್ನು ತೋರಿಸಿದ್ದಾರೆ. ಹೀಗೆ ಕಾರ್ಮಿಕ ವರ್ಗ ಕೋಮುವಾದು, ಜಾತೀವಾದೀ ಶಕ್ತಿಗಳಿಗೆ, ಭಾಷೆಯ ಮತ್ತು ಮಣ್ಣಿನ ಮಕ್ಕಳವಾದ ತನ್ನ ಐಕ್ಯತೆಯನ್ನು ಭಗ್ನಗೊಳಿಸಲು ಅವಕಾಶ ಕೊಡುವುದಿಲ್ಲ. ರಾಷ್ಟ್ರಿಯ ಚಳವಳಿ ಸಮಿತಿಯ ನೇತೃತ್ವದಲ್ಲಿ ಐಕ್ಯತೆಯನ್ನು ಕಾಯ್ದುಕೊಳ್ಳುತ್ತದೆ. ಎಂದು ಹೇಳಿದರು.

—ಜಿ. ಎನ್. ನಾಗರಾಜ್

ಬಿಜಾಪುರ ಜಿಲ್ಲಾ ಬಂದ್

ಆಂಧ್ರದ ಎನ್.ಟಿ. ರಾಮರಾವ್ ಸರಕಾರವನ್ನು ಸಂವಿಧಾನಕ್ಕೆ ವಿರುದ್ಧವಾಗಿ ಇಂದಿರಾ ಗಾಂಧಿಯ ಕೈವಾಡದಿಂದ ಆಂಧ್ರ ಗವರ್ನರ್ ವಿಸರ್ಜಿಸಿರುವುದನ್ನು ಖಂಡಿಸಿ, ಎನ್. ಟಿ. ಆರ್. ಸರಕಾರ ಮತ್ತೆ ಅಧಿಕಾರ ಮುಂದುವರಿಯುವಂತೆ ಒತ್ತಾಯ ಪಡಿಸಲು ಬಿಜಾಪುರ ಜಿಲ್ಲಾದ್ಯಾಂತ ಶಾಂತ ಬಂದ್ ಮತ್ತು ಪ್ರತಿಭಟನಾ ಸಭೆಗಳು ನಡೆದವು. ಎಲ್ಲ ಅಂಗಡಿಗಳು, ಸಿನಿಮಗಳು ಸ್ವಯಂ ಸ್ಫೂರ್ತಿಯಿಂದ ಬಂದ್ ಮಾಡಿ ಸಹಕರಿಸಿದವು. ಕೋರ್ಟ್, ಕಛೇರಿ, ಬ್ಯಾಂಕ್‌ಗಳೆಲ್ಲಾ ಬಂದಾಗಿದ್ದವು. ಬಿಜಾಪುರದಲ್ಲಿ ಬೃಹತ್ ಮೆರವಣಿಗೆಯಲ್ಲಿ ಸಾವಿರಾರು ಜನರು ಡಿ ಸಿ ಯವರಿಗೆ ಮನವಿ ಸಲ್ಲಿಸಿದರು. ಬಾಗಲಕೋಟೆಯಲ್ಲಿ ಅಸಿಸ್ಟೆಂಟ್ ಕಮಿಶ್‌ನರಿಗೆ ಮನವಿ ಸಲ್ಲಿಸಲಾಯಿತು. ಬಿಜಾಪುರದಲ್ಲಿ ಸಿ. ಪಿ. ಐ. (ಎಂ) ನಾಯಕ ಎ.ಕೆ. ಉಪಧ್ಯಾಯ ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ ಡಿ.ಎಂ. ಖಲಾಸಿ. ಮಾತನಾಡಿದರು.

ಟಾಲ್‌ಸ್ಟಾಯ್ ಅವರ ಕೊನೆಯ ದಿನಗಳು

ರಷ್ಯಾದ ಮಹಾನ್ ಸಾಹಿತಿ, ವಿಚಾರವಾದಿ ಕೌಂಟ್ ಲಿಯೋ ಟಾಲ್‌ಸ್ಟಾಯ್ (ಉಚ್ಚಾರ ಲೆವ್ ತೋಲ್‌ಸ್ತೋಯ್) ಅವರ ಬದುಕಿನ ಅಂತಿಮ ದಿವಗಳ ಕುರಿತು ಎರಡು ಭಾಗಗಳುಳ್ಳ ಕಥಾ ಚಿತ್ರವೊಂದು ಮಾಸ್ಕೋದ ಮ್ಯಾಕ್ಸಿಂಗೊರ್ಕಿ ಸ್ಟುಡಿಯೋದಲ್ಲಿ ನಿರ್ಮಾಣವಾಗುತ್ತಿದೆ. ಸೋವಿಯತ್ ಮತ್ತು ಜೆಕೊಸ್ಲವಾಕಿಯಾ ಚಿತ್ರ ನಿರ್ಮಾಪಕರು ಜಂಟಿಯಾಗಿ ತಯಾರಿಸುತ್ತಿರುವ ಈ ಮಹತ್ವ ಪೂರ್ಣ ಚಿತ್ರವನ್ನು ಸುಪ್ರಸಿದ್ಧ ಸೋವಿಯತ್ ನಿರ್ದೇಶಕ ಸೆರ್ಗ್ಯ ಗೆರಾಸಿಮೋವ್ ಅವರು ನಿರ್ದೇಶಿಸುತ್ತಿದ್ದಾರೆ. ಚಿತ್ರದಲ್ಲಿ ಟಾಲ್‌ಸ್ಟಾಯ್ ಪಾತ್ರದಲ್ಲಿ ಸ್ವತಃ ಅವರೇ ಅಭಿನಯಿಸಿದ್ದಾರೆ. "ಸ್ಲೀಪಲೆಸ್‌ನೆಸ್" (ನಿದ್ರಾಹೀನತೆ) ಮತ್ತು "ಗೋಯಿಂಗ್ ಅವೇ (ದೂರ ಹೋಗುವಿಕೆ) ಎಂಬ ಎರಡು ಭಾಗಗಳುಳ್ಳ ಕಥಾ ಚಿತ್ರವಿದು.

ಮೊದಲ ಭಾಗ 'ಸ್ಲೀಪಲೆಸ್‌ನೆಸ್' ಸಾಹಿತಿ ಟಾಲ್‌ಸ್ಟಾಯ್ ತಮ್ಮ ಮೆಚ್ಚಿನ ನಿವಾಸ ಯಾಸ್ನಾಯಾ ಪೊಲ್ಯಾನಾ ಎಸ್ಟೇಟನ್ನು ತ್ಯಜಿಸಿ ಹೋಗುವ ಘಟನಾವಳಿಗಳಿಂದ ಕೂಡಿದೆ. ಸಾಹಿತಿ ಟಾಲ್‌ಸ್ಟಾಯ್ ಅವರ ಬದುಕಿನ ಅಂತಿಮ ದಿನಗಳಲ್ಲಿ ಅವರಿಗೆ ಅವರ ಮಾನಸಿಕ ಯಾತನೆ ನೀಡಿದ ಕೌಟುಂಬಿಕ ಸಮಸ್ಯೆಗಳ ಮನ ಕರಗುವ ಸನ್ನಿವೇಶಗಳ ಚಿತ್ರಣ ಈ ಭಾಗದಲ್ಲಿ ನಿರೂಪಿತವಾಗಿದೆ. ಸಾಹಿತಿಯ ಬದುಕಿನ ಕೊನೆಯ ದಿನಗಳ ದುಃಖದಾಯಕ ಘಟನೆಗಳು ಮುಖ್ಯವಾಗಿ ಅಸ್ತಪೋವೋ ರೈಲ್ವೆ ನಿಲ್ದಾಣದಲ್ಲಿ ಅವರು ಒಂಟಿಯಾಗಿ ಅನಾರೋಗ್ಯದಿಂದ ನರಳುವ ಸನ್ನಿವೇಶಗಳು ಮತ್ತು 1910ರ ಶರತ್ಕಾಲದಲ್ಲಿ ಸಂಭವಿಸಿದ ಅವರ ಸಾವಿನ ದಾರುಣ ಘಟನೆ ದ್ವಿತೀಯ ಭಾಗದಲ್ಲಿ ನಿರೂಪಿತವಾಗಿದೆ. ಚಿತ್ರದ ದ್ವಿತೀಯ ಭಾಗದ ಚಿತ್ರೀಕರಣ ಈಗಾಗಲೇ ಮುಕ್ತಾಯವಾಗಿದ್ದು ಮೊದಲ ಭಾಗದ ಚಿತ್ರೀಕರಣ ಆರಂಭವಾಗಿದೆ.

ಟಾಲ್‌ಸ್ಟಾಯ್ ಅವರ ನೀಳ್ಗತೆಗಳು, ಕಾದಂಬರಿಗಳನ್ನು ಆಧರಿಸಿದ ಚಿತ್ರಗಳು ಈಗಾಗಲೇ ಬೆಳ್ಳಿ ತೆರೆಯ ಮೇಲೆ ಸಾಕಷ್ಟು ಮಿಂಚಿದೆ. ಹೀಗಾಗಿ ಅವರ ಕೃತಿಗಳ ಆಧಾರಿತ ಚಿತ್ರ ತೆಗೆಯಲು ಮನಗಿಷ್ಟವಿಲ್ಲ. ಆದುದರಿಂದ ಸಾಹಿತಿಯ ಜೀವನದ ಬಗ್ಗೆಯೇ ಚಿತ್ರ ತೆಗೆಯಲು ನಿರ್ಧರಿಸಿದೆ. ಯಾವುದೇ ಉತ್ತಮ ಸಾಹಿತ್ಯ ಕೃತಿಯಲ್ಲಿ ಅತ್ಯಂತ ಆಸಕ್ತಿಕರ ಅಂಶವೆಂದರೆ ಅದನ್ನು ರಚಿಸಿದ ಲೇಖಕನ ವ್ಯಕ್ತಿತ್ವವನ್ನು ಅರಿತುಕೊಳ್ಳುವುದೇ ಆಗಿದೆ. ಅದರಲ್ಲೂ ಮಹಾನ್ ಸಾಹಿತಿ ಟಾಲ್‌ಸ್ಟಾಯ್ ಅವರ ವ್ಯಕ್ತಿತ್ವ ಅತ್ಯಂತ ಸಂಕೀರ್ಣ ಮತ್ತು ತದ್ವಿರುದ್ಧವಾದ ಹಲವು ಪ್ರವೃತ್ತಿಗಳುಮೇಳೈಸಿದ ವ್ಯಕ್ತಿತ್ವವಾಗಿತ್ತು. ಪ್ರೇಮ, ಕೌಟುಂಬಿಕ ವ್ಯವಹಾರಗಳು, ಹುಚ್ಚು, ಮಕ್ಕಳ ಪಾಲನೆ ಪೋಷಣೆ ಮುಂತಾದ ಬದುಕಿನ ಮಾಮೂಲಿ ಘಟನೆಗಳ ಬಗ್ಗೆ ಗಂಡು ಹೆಣ್ಣಿನ ಸಂಬಂಧಗಳ ಬಗ್ಗೆ ಅವರ ಬದಲಾಗುವ ಮನೋಭಾವಗಳ ಬಗ್ಗೆ ಮಹಾನ್ ವ್ಯಕ್ತಿಯು ಜೀವನದಲ್ಲಿ ಯಾವ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾನೆ ಎಂಬುದನ್ನು ಅರಿತುಕೊಳ್ಳುವ ಆಶಯದಿಂದ ಟಾಲ್‌ಸ್ಟಾಯ್ ಜೀವನದ ಬಗ್ಗೆಯೇ ಚಿತ್ರ ತೆಗೆಯಲು ನಿರ್ಧರಿಸಿದೆ ಎಂದು ಹೇಳುತ್ತಾರೆ. 77ರ ಹರೆಯದ ಗೆರಾಸಿಮೋವ್, ಚಿತ್ರದ ಜೀವಾಳವೆನಿಸಿದ ಘಟನೆಗಳನ್ನು ಟಾಲ್‌ಸ್ಟಾಯ್ ಜೀವನಕ್ಕೆ ನಿಕಟವಾಗಿ ಸಂಬಂಧಿಸಿದ ಸ್ಥಳಗಳಲ್ಲಿಯೇ ಚಿತ್ರಿಸಲಾಗಿದೆ. ಮುಖ್ಯವಾಗಿ ಸಾಹಿತಿ ತನ್ನ ಬದುಕಿನ ಅನೇಕ ವರ್ಷಗಳನ್ನು ಕಳೆದ "ಯುದ್ಧ ಮತ್ತು ಶಾಂತಿ", 'ಅನ್ನಾಕರೆನೀನಾ' ಮುಂತಾದ ಜಗತ್ಪ್ರಸಿದ್ಧ ಕಾದಂಬರಿಗಳನ್ನು ರಚಿಸಿದ ಯಾಸ್ನಾಯಾ ಪೊಲ್ಯಾನಾ ಎಸ್ಟೇಟ್‌ನಲ್ಲಿ (ಇಂದು ಅದು ಟಾಲ್‌ಸ್ಟಾಯ್ ಸ್ಮಾರಕ ಮ್ಯೂಸಿಯಂ ಆಗಿದೆ) ನಲ್ಲಿ ಚಿತ್ರೀಕರಿಸಲಾಗಿದೆ. 1910 ಅಕ್ಟೋಬರ್ 20 ರಂದು ವೃದ್ಧ ಟಾಲ್‌ಸ್ಟಾಯ್ ತನ್ನ ನೆಚ್ಚಿನ ಎಸ್ಟೇಟನ್ನು ತ್ಯಜಿಸಿ ಹೋಗುವ ಮುನ್ನ ಪತ್ನಿ ಸೋಫಿಯಾ ಅಂದ್ರೆಯೆವ್ನಾಳಿಗೆ ಅಂತಿಮ ಪತ್ರ ಬರೆದಿರಿಸಿದ ಟೇಬಲ್, ರಾತ್ರಿ ವೇಳೆ ಮನೆಯಿಂದ ಹೊರಬರುವ ಮುನ್ನ ಬರೆಯುವ ಕೊಠಡಿಯಲ್ಲಿ ಸಾಹಿತಿ ನಂದಿಸಿದ ಮೊಂಬತ್ತಿ, ಅಂದು ಅಲ್ಲಿದ್ದ ಪುಸ್ತಕದ ಶೆಲ್ಫ್, ಗೋಡೆಯ ಮೇಲೆ ನೇತಾಡಿಸಿದ ಕುಟುಂಬದ ಸದಸ್ಯರ ಫೋಟೋಗಳು ಎಲ್ಲವೂ ಇಂದು ಹಿಂದೆ ಇದ್ದಂತೆಯೇ ಇವೆ. ಅವೆಲ್ಲವನ್ನೂ ಛಾಯಾಗ್ರಾಹಕ ಸೆರ್ಗ್ಯ ಫಿಲೊಪ್ಪೊವ್ ಅವರ ಕ್ಯಾಮರಾ ಅತ್ಯಂತ ಪ್ರಭಾವಶಾಲಿಯಾಗಿ ಸಿನಿಮಾಧ್ಯಮಕ್ಕೆ ಇಳಿಸಿಕೊಂಡಿದೆ.

ಟಾಲ್‌ಸ್ಟಾಯ್ ಅವರು ನಡೆದಾಡುವ ಮಾತನಾಡುವ ಶೈಲಿ ವಿಧಾನ (ಅವರು ಪೆನ್ನಿನ ಕೊನೆಯನ್ನು ಬೆರಳುಗಳಿಂದ ಬಿಗಿಹಿಡಿದು ಬರೆಯುವ ವಿಧಾನ ರೂಢಿಸಿಕೊಂಡಿದ್ದರು) ವನ್ನು ಗೆರಾಸಿಮೋವ್ ಗಾಢವಾಗಿ ಅಭ್ಯಾಸ ಮಾಡಿ, ಅವರ ಬದುಕಿನ ಪ್ರತಿಯೊಂದು ಸಣ್ಣ ವಿವರಗಳಿಗೂ ಗಾಢ ಗಮನ ನೀಡಿ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಟಾಲ್‌ಸ್ಟಾಯ್ ಕುಟುಂಬದ ಖಾಸಗಿ ವೈದ್ಯ ದುಶಾನ್ ಮಾಕೊವಿತ್‌ಸ್ಕೀ ಪಾತ್ರದಲ್ಲಿ ಜೆಕೊಸ್ಲವಾಕಿಯಾದ ನಟ ವ್ಲಾತಿಲ್ ಬೊರ್ಝೊವೊಯ್ ಅಭಿನಯಿಸಿದ್ದಾರೆ. ಈ ವೈದ್ಯನ ಸಾಹಿತಿಯ ಬದುಕಿನ ಅಂತಿಮ ದಿನಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದ. ಈ ಹಿಂದೆ ಹೇಳಿದಂತೆ 1910ರ ಅಕ್ಟೋಬರ್ 27 ರ ರಾತ್ರಿ, ಟಾಲ್‌ಸ್ಟಾಯ್ ರಹಸ್ಯವಾಗಿ ಮನೆ ತ್ಯಜಿಸಲು ನಿರ್ಧರಿಸಿದಾಗ, ಅವರಿಗೆ ಈ ಕಾರ್ಯದಲ್ಲಿ ನೆರವು ನೀಡಿದ ವ್ಯಕ್ತಿಯೇ ಈ ವೈದ್ಯ.

[ಇದೇ ಸೆಪ್ಟೆಂಬರ್ 9 ರಂದು ಟಾಲ್‌ಸ್ಟಾಯ್ ಅವರ ಜನ್ಮ ದಿನಾಚರಣೆ – ಹುಟ್ಟಿದ್ದು 1821 ರಲ್ಲಿ]

(1ನೇ ಪುಟದಿಂದ)

ಕೇಂದ್ರ ಕಾಂಗ್ರೆಸ್ (ಐ) ಸರ್ಕಾರದ ಹತಾಶ ರಾಜಕೀಯ ಚಟುವಟಿಕೆಗಳು ಅದು ದೇಶದಲ್ಲಿ ಸೈನಿಕ ಆಡಳಿತ ನಡೆಸಬೇಕಾದ ನಿರ್ಬಂಧಕ್ಕೆ ಒಳಪಡಿಸುತ್ತಿದೆ ಪಾರ್ಲಿಮೆಂಟರೀ ಪ್ರಜಾಪ್ರಭುತ್ವ ಇರಬೇಕೆಅಥವ ಸರ್ವಾಧಿಕಾರೀ ಅಧ್ಯಕ್ಷ ಮಾದರಿಯ ಸರ್ಕಾರ ಇರಬೇಕೆ ಎಂಬುದು ವಿಚಿತ್ರ ರೀತಿಯಲಿ, ನಿರ್ಧರಿತಗೊಳ್ಳುತ್ತಿದೆ ಒಂದೊಂದೇ ರಾಜ್ಯಗಳು, ಒಂದೊಂದೇ ಪ್ರದೇಶಗಳು ಮಿಲಿಟರಿ ಆಡಳಿತೆಗೆ ಒಳಪಡುತ್ತಿವೆ ನಾಗರೀಕ ಆಡಳಿತ ನಾಶವಾಗುತ್ತಿದೆ.

ಮುನ್ನುಗ್ಗಿ ಬರುತ್ತಿರುವ ಮಿಲಿಟರಿ ಆಡಳಿತ ಮತ್ತು ಸರ್ವಾಧಿಕಾರವನ್ನು ದೇಶದ ಎಲ್ಲಾ ಎಡ, ಪ್ರಜಾಪ್ರಭುತ್ವವಾದೀ, ಪ್ರಗತಿಪರ ಮತ್ತು ದೇಶಪ್ರೇಮಿ ಶಕ್ತಿಗಳು ಒಂದಾಗಿ ಎದುರಿಸಬೇಕೆಂದು ನಾವು ಒತ್ತಾಯಿಸುತ್ತೇವೆ. ಪ್ರಜಾಪ್ರಭುತ್ವವು ಎದುರಿಸುತ್ತಿರುವ ಈ ಸವಾಲನ್ನು ಎದುರಿಸದಿದ್ದಲ್ಲಿ, 1975 ರಲ್ಲಿ ನಾವು ಅನುಭವಿಸಿದ ತುರ್ತು ಪರಿಸ್ಥಿತಿ ಗಿಂತಲೂ ಭೀಕರವಾದ ರೀತಿಯ ಎರಡನೆಯ ತುರ್ತು ಪರಿಸ್ಥಿತಿಯನ್ನು ಅನುಭವಿಸ ಬೇಕಾಗುತ್ತದೆನ್ನುವುದು ಖಂಡಿತ.

[ಪಕ್ಷದ ಕೇಂದ್ರ ಸಮಿತಿಯ ಮುಖ ಪತ್ರವಾದ ಪೀಪಲ್ಸ್ ಡೆಮಾಕ್ರಸಿ" ಯ ಆಗಸ್ಟ್ 26, 1984 ರ ಸಂಚಿಕೆಯ ಸಂಪಾದಕೀಯದ ಅನುವಾದ ಇದು.]

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K. V. Temple Street, Sultanpet. B 53 Phone : 24514
Editor : P. Ramachandra Rao
Managing Editor : N. K. Upadhyaya